SRI K. H. RANGANATH.—Sir, Krishnappa and Ramu, Security guards have been arrested on a complaint filed by one Sri Venkataramana. These two men were released on bail later on. The police have also arrested one Sri Appaiah on a complaint by the Administrative Manager of Hegde and Gole Factory.

ಶ್ರೀ ಮೈಕಲ್ ಬಿ. ಫರ್ನಾಂಡಿಸ್ .—ಮಾನ್ಯ ಅಧ್ಯಕ್ಷರೆ, ಈ ಒಂದು ಸೆಟಪ್ ಏನಿದೆ ಅಲ್ಲಿ ಮೊದಲಿನಿಂದಲೂ ಕಾರ್ಮಿಕ ವಿರೋಧಿ ನೀತಿ ಇದೆ. ಅಲ್ಲಿ ಕಾರ್ಮಿಕರನ್ನು ನಾನಾ ರೀತಿಯಲ್ಲಿ ಹಿಂಸೆ ಮಾಡುತ್ತಿದ್ದಾರೆ ಈ ಮಾಲೀಕರ ಪ್ರವೃತ್ತಿ ಏನಿದೆ ಅದು ಸರಿಯಾಗಿಲ್ಲ. ಇವರು ಟ್ರೇಡ್ ಯೂನಿಯನ್ನಿನ ಲೀಡರ್ ಆಗಿದ್ದಾರೆ. ದೊಡ್ಡ ಮಾಲೀಕರೂ ಆಗಿದ್ದಾರೆ. ಸರ್ಕಾರದ ಹಣವೂ ಕೂಡ ಇದರಲ್ಲಿ ಇನ್ವೆಸ್ಟ್ ಆಗಿದೆ. ೧೯೭೨ನೇ ಇಸವಿಯಲ್ಲಿ ಇವರು ಗೂಂಡಾಗಳನ್ನು ಕರೆಸಿ ಕಾರ್ಮಿಕರನ್ನು ಹೊಡೆಸಿದ್ದಾರೆ. ಆ ಕಾರ್ಮಿಕರನ್ನು ಆಸ್ಪತ್ರೆಗೆ ದಾಖಲು ಮಾಡಿದ ನಿದರ್ಶನಗಳೂ ಸಹಾ ಇದೆ. ಆ ಸಮಯದಲ್ಲಿ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಟ್ರೇಡ್ ಯೂನಿಯನ್‌ನ ಲೀಡರ್ ಆಗಿರತಕ್ಕ ಇವರಿಗೆ ಕಾರ್ಮಿಕರ ಬಗ್ಗೆ ಒಂದು ಸೌಜನ್ಯವೂ ಕೂಡ ಇಲ್ಲ. ಇವರು ಮಾಲೀಕರಲ್ಲ. ಇವರನ್ನು ರಾಕ್ಷಸರು ಎಂದರೆ ತಪ್ಪಾಗಲಾರದು. ಇವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಅವರ ಮೇಲೆ ದೂರು ಇದೆ. ಅವರ ವಿಚಾರದಲ್ಲಿ ಮಾನ್ಯ ಸದಸ್ಯರೇನು ಹೇಳಿದರು ಅದು ನನಗೂ ಸ್ವಲ್ಪ ಗೊತ್ತು. ಇದು ೧೯೭೨ನೇ ಇಸವಿ ವಿಚಾರ.

## Budget Estimates for 1979-80 Demands for Grant

*Damand No. 54 and 55 (Debate Continued)*

† ಶ್ರೀ ಎಚ್. ಡಿ ಚೌಡಯ್ಯ (ಕೆರಗೋಡು).—ಸನ್ಮಾನ್ಯ ಅಧ್ಯಕ್ಷಣಿಯವರೆ, ಧೀರ್ಘಾವಧೀ ಸಾಲದ ವಿಷಯದಲ್ಲಿ ನಾನು ಹೆಚ್ಚಿಗೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಲೋನ್ಸ್ ಆಂಡ್ ಅಡ್ವಾನ್ಸಸ್ ವಿಷಯದಲ್ಲಿ ಒಂದು ತಪ್ಪು ತಿಳುವಳಿಕೆಯಿಂದಾಗಿ ಮಾರ್ಚ್ ಏಪ್ರಿಲ್ ಮೇ ಮತ್ತು ಜೂನ್ ತಿಂಗಳಲ್ಲಿ, ಡಿ.ಸಿ.ಸಿ ಮತ್ತು ಪಿ.ಎಲ್.ಡಿ. ಬ್ಯಾಂಕ್‌ಗಳು ರೈತರಿಗೆ ಸಾಲವನ್ನು ಮತ್ತು ಮುಂಗಡವನ್ನು ಕೊಡತಕ್ಕದ್ದನ್ನು ನಿಲ್ಲಿಸಿ ಸಾಲವನ್ನು ವಸೂಲು ಮಾಡಬೇಕು ಎನ್ನತಕ್ಕದ್ದು ಸರಿಯಲ್ಲ. ಈ ವಿಷಯದಲ್ಲಿ ನಾನು ಮಾನ್ಯ ಮಂತ್ರಿಗಳವರ ಜೊತೆಯಲ್ಲಿ ಕೆಲವು ದಿವಸಗಳ ಹಿಂದೆ ಪ್ರಸ್ತಾಪ ಮಾಡಿದೆ. ಯಾವಾಗಲೂ ಮುಂಗಡವಾಗಿ ಸಾಲ ಕೊಡುವುದು ಮತ್ತು ಸಾಲದ ವಸೂಲಿ ಎರಡೂ ಜೊತೆಜೊತೆಯಾಗಿ ಒಟ್ಟಿಗೆ ಹೋಗಬೇಕು. ಯಾವಾಗ ಸರ್ಕಾರದವರು ಸಾಲವನ್ನು ರೈತರಿಗೆ ಕೊಡುವುದಿಲ್ಲ ಎಂದು ಗೊತ್ತಾಗುತ್ತದೆಯೋ ಆಗ ಸಾಲ ವಸೂಲು ಆಗುವುದಿಲ್ಲ. ಈ ಒಂದು ಕಾರಣದಿಂದ ಏಪ್ರಿಲ್ ಮೇ ಹಾಗೂ ಜೂನ್‌ನಲ್ಲಿ ಪಿ.ಎಲ್.ಡಿ. ಬ್ಯಾಂಕ್ ಮುಖಾಂತರ ಸಾಲವನ್ನು ಕೊಡತಕ್ಕದ್ದನ್ನು ನಿಲ್ಲಿಸಿದ್ದಾರೆ. ಅದನ್ನು ಕೂಡಲೇ ಕೊಡತಕ್ಕ ಒಂದು ವ್ಯವಸ್ಥೆ ಮಾಡಬೇಕು. ನೀರಾವರಿ ಪಾಗೂ ಬಾವಿ ತೆಗೆಯುತಕ್ಕ ಕೆಲಸವನ್ನು ದುಳಿಗಾಲದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಜುಲೈ ತಿಂಗಳಲ್ಲಿ ಮಳೆ ಶುರು ಆಗುತ್ತದೆ. ಆದ್ದರಿಂದ ಈ ಒಂದು ಕಾರಣದಿಂದ ಏಪ್ರಿಲ್, ಮೇ ಹಾಗೂ ಜೂನ್‌ನಲ್ಲಿ ಸಾಲವನ್ನು ಕೊಡತಕ್ಕ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಸಾಯನಿಕ ಗೊಬ್ಬರದ ಹಂಚಿಕೆಯ ವಿಷಯದಲ್ಲಿ ನಮ್ಮ ರಾಜ್ಯದಲ್ಲಿ ಟೂ ಟೈರ್ಸ್ ಸಿಸ್ಟಮ್ ಜಾರಿಯಲ್ಲಿದೆ. ಅದಕ್ಕೆ ಕಾರಣವನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಬ್ಯಾಂಕ್ ಗ್ಯಾರಂಟಿ ಕೊಡತಕ್ಕ ವ್ಯವಸ್ಥೆ ಇದೆಯೋ ಅಲ್ಲಿ ಶ್ರೀ ಟೈರ್ಸ್ ಸಿಸ್ಟಮ್ ಜಾರಿಗೆ ತಂದಿದ್ದಾರೆ. ಆದರೆ ಟೂ ಟೈರ್ಸ್ ಸಿಸ್ಟಮ್ ಜಾರಿಗೆ ತಂದಿದ್ದೇವೆಂದು ಹೇಳಿದ್ದಾರೆ. ಈ ಫರ್ಟಿಲೈಸರ್ ಬೆಲೆ ವಿಷಯದಲ್ಲಿ ನಾವು ಅನೇಕ ಸಾರಿ ಸರ್ಕಾರದ ಗಮನಕ್ಕೆ, ಇಲಾಖೆಯ ಗಮನಕ್ಕೆ ತಂದಿದ್ದೇವೆ. ಹಳ್ಳಿಯಲ್ಲಿರತಕ್ಕ ಪ್ರೈಮರಿ ಸೊಸೈಟಿಯಲ್ಲಿ ಮಾರತಕ್ಕಂಥ ಬೆಲೆಗೂ, ಆಗ್ರೋ ಕೇಂದ್ರದಲ್ಲಿ ಮತ್ತು ಪ್ರೈವೇಟ್ ಮರ್ಚೆಂಟ್ಸ್ ಮಾರತಕ್ಕಂಥ ಬೆಲೆಗೂ ಹೋಲಿಕೆ ಮಾಡಿದರೆ ಒಂದು ಮೂಟೆಗೆ ಎರಡು, ಮೂರು ರೂಪಾಯಿ ಹೆಚ್ಚಿಗೆ, ಈ ಸೊಸೈಟಿಗಳಲ್ಲಿ

ಮೂರತಕ್ಕಂಥಾದ್ದಕ್ಕೆ ರೈತ ಕೊಡಬೇಕಾಗುತ್ತದೆ. ನಾನು ಒಂದು ತಿಂಗಳ ಹಿಂದೆ ನಡೆದ ಕನ್ಸ್ಯೂಲ್ಟೆಟೀವ್ ಕಮಿಟಿಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ರಿಜಿಸ್ಟ್ರಾರ್ ಮತ್ತು ಫೆಡರೇಷನ್ನಿನ ಮ್ಯಾನೇಜಿಂಗ್ ಡೈರಕ್ಟರ್ ಇಬ್ಬರೂ ಕೂಡ ಜಾಯಿಂಟಾಗಿ ಈ ವಿಷಯದಲ್ಲಿ ಪರಿಶೀಲನೆಮಾಡಿ ಕೂಡಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಮಂತ್ರಿಗಳು ಆದೇಶಕೊಟ್ಟರು, ಆದು ಪ್ರೊಸೀಡಿಂಗ್ಸ್‌ನಲ್ಲಿದೆ. ಮಂತ್ರಿಗಳು ಆದೇಶಕೊಟ್ಟು ಒಂದು ಒಂದು ಒಂದೂವರೆ ತಿಂಗಳಾಯಿತು, ಆದರೂ ಕೂಡ ತಹಲ್‌ವೆರೆ ಕ್ರಮ ಕೈಗೊಂಡಿಲ್ಲ. ನಿನ್ನೆ ಆಥವಾ ಇವತ್ತು ಏನಾದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕು.

ಇನ್ನು ಕೋಆಪರೇಟೀವ್ ಪ್ರೊಸೆಸಿಂಗ್ ಸೊಸೈಟಿಗಳ ಒಂದು ತಃಖ್ತೆಯನ್ನು ಇಲ್ಲಿ ಕೊಟ್ಟಿದ್ದಾರೆ. ರಾಜ್ಯದಲ್ಲಿ ೧೫೫ ಕೊಆಪರೇಟಿವ್ ಪ್ರೊಸೆಸಿಂಗ್ ಯುನಿಟ್ಸ್ ಇವೆ, ಇದರಲ್ಲಿ ಕೆಲವು ನೇರವಾಗಿ ಪ್ರೊಸೆಸಿಂಗ್ ಯೂನಿಟ್ಸ್‌ನ್ನು ನಡೆಸತಕ್ಕ ಸೊಸೈಟಿಗಳಿವೆ. ಕೆಲವು ಮಾರಾಟ ಸಹಕಾರ ಸಂಘಪ ವತಿಯಿಂದ ನಡೆಸತಕ್ಕ ಯೂನಿಟ್‌ಗಳಿವೆ. ಸರ್ಕಾರ ಇದರ ಬಗ್ಗೆ ಸ್ವಲ್ಪ ವಿವರವಾಗಿ ಕೊಟ್ಟರೆ ಚೆನ್ನಾಗಿತ್ತು. ಸಾಮಾನ್ಯವಾಗಿ ಸರ್ಕಾರದ ಮನಸ್ಸು ಏನಿದೆ ಎಂದರೆ, ಯಾವ ಯೂನಿಟ್‌ನಲ್ಲಿ ಕಾರ್ಯಕ್ರಮ ಚೆನ್ನಾಗಿ ಕಡೆಯುವುದಿಲ್ಲವೋ ಅದನ್ನು ಬೆಳಕಿಗೆ ತಂದರೆ ನಾಳೆ ನಮ್ಮ ಸರ್ಕಾರದ ಮೇಲೆ ದುಷ್ಪರಿಣಾಮವುಂಟಾಗುತ್ತದೆ ಎಂದು ಅದರ ಬಗ್ಗೆ ವಿವರವಾಗಿ ಹೇಳಿಲ್ಲ. ಮೂರು ಮತ್ತು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎನ್.ಡಿ.ಸಿ.ಯವರು ರಾಜ್ಯಸರ್ಕಾರದ ಸಹಾಯದಿಂದ ಅನೇಕ ಪ್ರೊಸೆಸ್ ಯೂನಿಟ್ಸ್‌ನ್ನು ರಾಜ್ಯದಲ್ಲಿ ಪ್ರಾರಂಭಮಾಡಿದರು. ಒಂದು ಉದಾಹರಣೆ ಕೊಡುವುದಾದರೆ, ನನ್ನ ತಾಲ್ಲೂಕಿ ಪಲ್ಲಿ ಇರತಕ್ಕಂಥ ರೈತರ ಮಾರಾಟ ಸಹಕಾರ ಸಂಘದಲ್ಲಿ ಮಾಡರ್ನ್ ರೈಸ್ ಮಿಲ್ ಅದಕ್ಕೆ ಸೇರಿದಂಥ ಸೈಲೋಸ್, ಕ್ಯಾಟ್ಲ ಫೀಡಿಂಗ್ ಯೂನಿಟ್ಸ್, ಸಾಲ್ವೆಂಟ್ ಎಕ್ಟ್ರಾಷನ್ ಪ್ಲಾಂಟ್‌ನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭ ಮಾಡಿದರು. ಇದಕ್ಕೆ ರಾಜ್ಯಸರ್ಕಾರ, ಎನ್.ಸಿ.ಡಿ.ಸಿ.ಗೆ ಲಕ್ಷಾಂತರ ರೂಪಾಯಿ ಸಾಲವನ್ನು ಕೊಟ್ಟಿದೆ. ಹಿಂದೆ ನಾನೂ ಇದಕ್ಕೆ ಡೈರಕ್ಟರ್ ಆಗಿದ್ದೆ ಮಂಡ್ಯಾಕ್ಕೆ ಯುನೈಟೆಡ್ ಕಿಂಗ್‌ಡಂ ತಜ್ಞರು ಬಂದ ಕಾಲದಲ್ಲಿ ಅವರಿಗೆ ನಾನು ಒಂದು ಪ್ರಶ್ನೆ ಹಾಕಿದೆ. ಹೀಗೆ ಹೊಸ ಯೂನಿಟ್ಸನ್ನು ಪ್ರಾರಂಭ ಮಾಡುತ್ತಿದ್ದೀರಿ, ಇದಕ್ಕೆ ಲಕ್ಷಾಂತರ ರೂಪಾಯಿ ಸಾಲವನ್ನು ಕೊಡುತ್ತಿದ್ದಾರೆ. ನಮ್ಮ ಮೇಲೆ ಎಕ್ಸಪರಿಮೆಂಟನ್ನು ಮಾಡುತ್ತಿದ್ದೀರಿ. ಒಂದು ವೇಳೆ ನಷ್ಟ ಸಂಭವಿಸಿದರೆ ಇದಕ್ಕೆ ಯಾರು ಕಾರಣ ಎಂದು ನಾನು ಪ್ರಶ್ನೆ ಹಾಕಿದೆ ನಮ್ಮ ರಾಜ್ಯಸರ್ಕಾರದವರೇ ಇದರ ರಿಸ್ಕ್‌ಗೆ ಬರಬೇಕು ಎಂದು ಅವರು ಹೇಳಿದರು. ಅವರ ಹೆಸರು ಬ್ರೌನ್ ಎಂದು; ಅವರು ಹೇಳಿದರು. ನಿಮ್ಮ ಇಲಾಖೆ ಅಧಿಕಾರಿಗಳಿಗೆ ಅವರ ಹೆಸರು ಗೊತ್ತಿದೆ. ಇವತ್ತಿನದಿವಸ ಮಂಡ್ಯದಲ್ಲೇ ಅಲ್ಲ ರಾಜ್ಯದ ಇತರ ಕಡೆಗಳಲ್ಲಿ ಇರತಕ್ಕಂಥ ಯೂನಿಟ್ಸ್ ಕೆಲವು ಪೂರ್ಣವಾಗಿ, ಕೆಲವು ಅಪೂರ್ಣವಾಗಿ ನಷ್ಟದಿಂದ ನಡೆಯುತ್ತಾ ಇವೆ. ಇದಕ್ಕೆ ಸ್ವಾಭಾವಿಕವಾದಂಥ ಕಾರಣವೋ ಅಥವಾ ಕೃತಕವಾದಂಥ ಕಾರಣವೋ ಒಟ್ಟಿನಲ್ಲಿ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಯೋಚನೆಮಾಡಬೇಕಾಗಿದೆ. ನಾನಾದರೂ ಕೂಡಿ ಈ ಸಂದರ್ಭದಲ್ಲಿ ಸನ್ಮಾನ್ಯ ಮಂತ್ರಿಗಳಲ್ಲಿ ವಿನಮವಿಮಾಡಿ ಕೊಳ್ಳತಕ್ಕಳ್ಳತಕ್ಕಂಥಾದ್ದು ಇಷ್ಟೆ. ಇಂತಹ ಯೂನಿಟ್ಸ್ ಎಲ್ಲೆಲ್ಲಿಯೋ ಅಂಥಾ ಕಡೆ ಕೆಲವರು ಎಕ್ಸ್‌ಪರ್ಟ್ಸನ್ನೊಳಗೊಂಡ ಹೈ ಪವರ್ ಕಮಿಟಿಗಳನ್ನು ಕಾನ್ಸ್ಟಿಟ್ಯೂಟ್ ಮಾಡಿ ಅವರಿಗೆ ಸರಿಯಾಗಿ ಆದೇಶಕೊಟ್ಟು ಒಂದೆರಡು ತಿಂಗಳಲ್ಲಿ ವರದಿಯನ್ನು ತರಿಸಿಕೊಳ್ಳಬೇಕು. ಏಕೆಂದರೆ ಅವರಿಗೆ ಲಕ್ಷಗಟ್ಟಲೆ ಸಾಲ ಕೊಟ್ಟಿದ್ದಾರೆ. ಮಂಡ್ಯ ಸೊಸೈಟಿಗೆ ೨೦ ಲಕ್ಷಕ್ಕೆ ಕಡಿಮೆ ಯಿಲ್ಲದೆ ಸಾಲ ಕೊಟ್ಟಿದ್ದೀರಿ ೨೦ ವರ್ಷಗಳಾದರೂ ಈ ಹಣವನ್ನು ಮರುಪಾವತಿ ಮಾಡಲಿಕ್ಕೆ ಸಾಧ್ಯವಿಲ್ಲ. ಇದೇರೀತಿ ಬೇರೆ ಕಡೆಗಳಲ್ಲೂ ಲಕ್ಷಾಂತರ ರೂಪಾಯಿಗಳ ಸಾಲವನ್ನು ಕೊಟ್ಟಿದ್ದೀರಿ. ಇದನ್ನು ಸಬ್ಸಿಡಿ, ಷೇರ್ ಕ್ಯಾಪಿಟಲ್ಲಾಗಿ ಕನ್‌ವರ್ಟ್‌ಮಾಡಿ ಆ ಯೂನಿಟ್ಸ್ ಲಾಭದಾಯಕವಾದ ರೀತಿಯಲ್ಲಿ ನಡೆಯತಕ್ಕ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಡೈರಿ ಕೊಆಪರೇಟಿವ್ ಸೊಸೈಟಿಗಳ ವಿಷಯದಲ್ಲಿ ಹೇಳುವುದಾದರೆ, ಈ ಡೈರಿ ಯೂನಿಟ್ಸ್ ಏನಿದೆ ಇದು ಸಹಕಾರ ಖಾತೆಗೆ ಸಂಬಂಧಪಟ್ಟಿದ್ದು, ಕೆ.ಡಿ.ಡಿ.ಸಿ ಪ್ರತ್ಯೇಕವಾದ ಖಾತೆಗೆ ಸಂಬಂಧಪಟ್ಟದ್ದು. ನಾನು ಇದರಲ್ಲಿ ಒಂದು ವರ್ಷ ಸಕ್ರಿಯವಾಗಿ ಭಾಗವಹಿಸಿಕೊಂಡು ಬಂದಿದ್ದೇನೆ. ನಿಜವಾಗಿಯೂ ಹೇಳುವುದಾದರೆ, ಇದರ ಬಗ್ಗೆ ರೂರಲ್ ಏರಿಯಾದಲ್ಲಿ ಮೆಚ್ಚುಗೆ ಇದೆ. ಇವತ್ತಿನದಿವಸ ರಾಗಿ, ಭತ್ತ, ಮುಂತಾದ ಧಾನ್ಯಗಳ ಧಾರಣೆವಾಸಿ ಕುಸಿದಿರತಕ್ಕ ಸಂದರ್ಭದಲ್ಲಿ ಇದಕ್ಕೆ ಹೋಲಿಸಿದರೆ ಡೈರಿ ಸೊಸೈಟಿಗಳ

ವಿಷಯದಲ್ಲಿ ಬಹಳ ಮೆಚ್ಚುಗೆ ಇದೆ. ನಿಜವಾಗಿಯೂ ಇದು ಒಂದು ವರಪ್ರಸಾದ ಎನ್ನತಕ್ಕಂಥ ಮಾತನ್ನು ಜನರಿಂದ ಕೇಳುವುದಕ್ಕೆ ಸಂತೋಷವಾಗುತ್ತದೆ. ಆದರೆ ಈ ಯೂನಿಟ್ಸ್‌ಗೂ ಕೆ.ಡಿ.ಡಿ.ಸಿ. ಗೂ ಕೊಆರ್ಡಿನೇಷನ್ ಇಲ್ಲ. ಮಂಡ್ಯ ತಾಲ್ಲೂಕಿನಲ್ಲಿ ನಾವು ಈ ಸೊಸೈಟಿಗಳನ್ನು ಆರ್ಗನೈಸ್ ಮಾಡಿದರೆ ೬೩ ಪಂಚಾಯತಿಗಳು ಕವರ್ ಆಗುತ್ತವೆ; ೫೩ ರೂಟ್ಸ್ ಇವೆ. ಮಂಡ್ಯದಿಂದ ಮೈಸೂರಿಗೆ ಹಾಲನ್ನು ತೆಗೆದುಕೊಂಡು ಹೋಗಬೇಕಾದರೆ ೨೮ ಮೈಲಿ ಆಗುತ್ತದೆ. ಮಂಡ್ಯದಲ್ಲಿರತಕ್ಕ ಕೊನೇ ಪ್ರದೇಶ ಅಂದರೆ ೧೮ ಮೈಲಿ. ಈ ೪೬ ಮೈಲಿ ದೂರ ಹಾಲನ್ನು ತೆಗೆದುಕೊಂಡು ಹೋಗಬೇಕಾದರೆ ಹಾಲು ಕೆಡುವುದಕ್ಕೆ ಅವಕಾಶವಾಗುತ್ತದೆ. ಮಂಡ್ಯದಲ್ಲಿ ಎರಡು, ಎರಡೂವರೆ ಸಾವಿರ ಲೀಟರ್ ಕೆಪಾಸಿಟಿ ಇರತಕ್ಕ ಚಿಲ್ಲಿಂಗ್ ಸೆಂಟರ್ ಇದೆ, ದುರದೃಷ್ಟವಶಾತ್ ಇದು ಸರಿಯಾಗಿ ಕೇಸ ಮಾಡುತ್ತಿಲ್ಲ. ಇದನ್ನು ೧೦ ಸಾವಿರ ಲೀಟರ್ ಕೆಪಾಸಿಟಿಗೆ ಹೆಚ್ಚಿಸಿದ್ದೇ ಆದರೆ ನೇರವಾಗಿ ಹಾಲನ್ನು ಮೈಸೂರಿಗೆ ತೆಗೆದುಕೊಂಡು ಹೋಗುವುದರ ಬದಲು ಈ ಚಿಲ್ಲಿಂಗ್ ಸೆಂಟರಿನಲ್ಲಿ ಪ್ರೊಸೆಸ್ ಮಾಡಿ ನಂತರ ಮೈಸೂರಿಗೆ ಸಾಗಿಸುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಮಂಡ್ಯದಲ್ಲಿ ಕನಿಷ್ಟಪಕ್ಷ ೧೦ ಸಾವಿರ ಲೀಟರ್ ಕೆಪಾಸಿಟಿಯ ಸ್ಮೊಳಗೊಂಡ ಚಿಲ್ಲಿಂಗ್ ಸೆಂಟರನ್ನು ಒಪನ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ಸೊಸೈಟಿಗಳ ವಿಷಯವಲ್ಲಿ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿರತಕ್ಕ ಹುಲಿಕೆರೆ ಟನಲ್ ವಿಶ್ವ ಪ್ರಸಿದ್ಧವಾದ ಸ್ಥಳ. ಅಲ್ಲಿ ೩ ವರ್ಷ ಕೆನರಾಬ್ಯಾಂಕ್‌ನಿಂದ ಸಾಲ ಪಡೆದಿದ್ದಾರೆ. ಈಗಾಗಲೇ ರಿಡೇವೆಂಟ್ ಮಾಡತಕ್ಕ ಕಾಲ ಅಂದರೆ ಮೊದಲನೇ ಇನ್‌ಸ್ಟಾಲ್‌ಮೆಂಟ್ ಕಟ್ಟತಕ್ಕ ಕಾಲ ಬಂದರೂ ಇನ್ನೂ ಸರ್ವೀಸ್ ಕೊಟ್ಟಿಲ್ಲ ಅಲ್ಲಿ ಕೆಲಸ ಮುಗಿದೆ. ಇದಕ್ಕೆ ಕಾರಣವೇನೆಂದರೆ, ಇಬ್ಬರಿಗೂ ಜಗಳ. ಅ೨ ಕೃಷ್ಣರಾಜಸಾಗರ ಎಕ್ಸಿಕ್ಯೂಟೀವ್ ಇಂಜನಿಯರ್ ಅಧ್ಯಕ್ಷರಾಗಿದ್ದಾರೆ ಮಂಡ್ಯ ಡಿವಿಜನ್ ಸೊಸೈಟಿ ರಿಜಿಸ್ಟ್ರಾರ್ ಸೆಕ್ರೆಟರಿ ಯಾಗಿದ್ದಾರೆ. ಈಗ ೩ ತಿಂಗಳಲ್ಲಿ ಎಷ್ಟು ಸೊಸೈಟಿ ರಿಜಿಸ್ಟ್ರಾರುಗಳನ್ನು ಬದಲಾಯಿಸಿದ್ದಾರೆ. ಮಂಡ್ಯ ರಿಜಿಸ್ಟ್ರಾರ್ ಕತೆಯೂ ಅದೇ. ೮ ದಿವಸಕ್ಕೆ ಬದಲಾಯಿಸುತ್ತಾರೆ ಎಕ್ಸಿಕ್ಯೂಟೀವ್ ಇಂಜನಿಯರ್ ಇವರ ಮೇಲೆ ಹೇಳುತ್ತಾರೆ, ಇವರು ಅವರ ಮೇಲೆ ಹೇಳುತ್ತಾರೆ ವಿ.ಸಿ. ಮಾಡರ್ನೈಸೇಷನ್ ಅಸ್ತ್ರಿಭಾರ ಶಿಲೆ ಹಾಕತಕ್ಕ ಸಂದರ್ಭದಲ್ಲಿ ಅಧಿಕಾರಿಗಳಿಗೆ ಅನ್‌ಆಫಿಷಿಯಲಾಗಿ ಚೀಪ್ ಮಿನಿಸ್ಟರಿಂದ ಸ್ವಿಚ್‌ಆನ್ ಮಾಡಿಸುತ್ತೇನೆ ಎಂದು ಗಲಾಟೆಮಾಡಿದ್ದರಿಂದ ಈಗ ಒಂದು ರೂಪಕ್ಕೆ ಬಂದು ಸರ್ವೀಸ್ ಕೊಡತಕ್ಕ ಪರಿಸ್ಥಿತಿಯಲ್ಲಿದೆ. ಕೆಲವೊಂದು ಫಾರ್ಮಾಲಿಟೀಸ್ ಇಇದೆ ಅದು ಏನು ಎನ್ನುವುದನ್ನು ಪರಿಶೀಲನೆಮಾಡಿ ಸರ್ವೀಸ್ ಕೊಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಕೇಳಬಯಸುತ್ತೇನೆ.

ಇನ್ನು ಆಡಿಟ್ ವಿಷಯದಲ್ಲಿ ಹೇಳುವುದಾದರೆ, ಇದು ಸಹಕಾರ ಸಂಘಗಳಲ್ಲಿ ಬಹು ಮುಖ್ಯವಾದ ಅಂಶ. ಆಡಿಟ್ ಇಲಾಖೆಯನ್ನು ಪ್ರತ್ಯೇಕವಾಗಿ ಮಾಡಿದ್ದೀರಿ, ಒಂದು ವರ್ಷವಾಗಿದೆ. ಬಹುಶಃ ಅದಕ್ಕೆ ಹಿಂದೆ ಇದೆರ ಚರಿತ್ರೆಯನ್ನು ನೋಡಿದರೆ ಆಡಿಟ್ ಸಮರ್ಪಕವಾಗಿ ಆಗುತ್ತಾ ಇಲ್ಲ. ಸಹಕಾರ ಸಂಘಗಳಲ್ಲಿ ಸಮರ್ಪಕವಾಗಿ ಆಡಿಟ್ ಆಗದೇ ಇರುವುದರಿಂದ ಮಿಸ್ ಅಪ್ರೊಪ್ರಿಯೇಷನ್ ಮುಂತಾದುವು ಜಾಸ್ತಿಯಾಗುತ್ತದೆ. ಈಗ ಆಡಿಟ್ ಇಲಾಖೆಯನ್ನು ಪ್ರತ್ಯೇಕವಾದ ಒಂದು ಇಲಾಖೆಯನ್ನಾಗಿ ಮಾಡಿದ್ದೀರಿ. ಬಹುಶಃ ಇದರ ಪ್ರಗತಿಯನ್ನು ನಾವು ಹೋಲಿಕೆ ಮಾಡಿ ನೋಡಿದರೆ ತಾರೀಖು ೩೧ನೇ ಡಿಸೆಂಬರ್ ೧೯೭೭ ರಿಂದ ೩೧ನೇ ಡಿಸೆಂಬರ್ ೭೮ರ ವರೆಗೆ ಜಾಸ್ತಿ ಪ್ರೋಗ್ರೆಸ್ ಆಗಿಲ್ಲ. ಕೇವಲ ಒಂದೂ ಒಂದೂವರೆ ಪರ್ಸೆಂಟ್ ಮಾತ್ರ ಪ್ರೊಗ್ರೆಸ್ ಜಾಸ್ತಿ ಇದೆ. ವರದಿಯಲ್ಲಿ "The percentage of audit of societies works out as 35.78 as at the end of December,1978" ಎಂದು ಇದೆ. ಅಂದರೆ ೧ ವರ್ಷಕ್ಕೆ ಸುಮಾರು ೭೦ ಪರ್ಸೆಂಟ್ ಆಗುತ್ತದೆ. ಇನ್ನು ೩೦ ಪರ್ಸೆಂಟ್ ಸೊಸೈಟಿಗಳಲ್ಲಿ ಆಡಿಟ್ ಆಗದೇ ಉಳಿದಂತಾಯಿತು. ಇದರಿಂದ ನೀವು ಪ್ರತ್ಯೇಕ ಇಲಾಖೆಯನ್ನು ಮಾಡಿದರೂ ಕೂಡ ಏನು ಪ್ರಯೋಜನವಾಯಿತೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ನಾನು ಈ ವಿಷಯದಲ್ಲಿ ಈ ಕ್ಷೇತ್ರದಲ್ಲಿ ಕಾರ್ಯಕರ್ತನಾಗಿ ಕಳೆದ ೨೦, ೨೬ ವರ್ಷಗಳ ಅನುಭವದಿಂದ ಹೇಳುವುದಾದರೆ ಸರ್ಕಾರಕ್ಕೆ ಏನಾದರೂ ಸಹಕಾರ ಚಳುವಳಿ ಬಗ್ಗೆ ಕಾಳಜಿ ಇದ್ದರೆ, ಕಳಕಳಿ ಇದ್ದರೆ. ಈ ಸಹಕಾರ ಸಂಘಗಳಲ್ಲಿ ಆಗತಕ್ಕ ದುರುಪಯೋಗವನ್ನು ನೀವು ತಡೆಗಟ್ಟಬೇಕಾದರೆ, ತಪ್ಪು ಆದಮೇಲೆ ಅದನ್ನು ಸರಿಪಡಿಸುವುದರ ಬದಲು, ಪಿವೆನ್‌ಷನ್ ಈಜ್ ಬೆಟರ್ ದ್ಯಾನ್ ಕ್ಯೂರ್ ಎನ್ನುವ ಹಾಗೆ ಒಂದೆರಡು ಕೋಟಿ ರೂಪಾಯಿಗಳು ಈ ಸಿಬ್ಬಂದಿಗೆ ಹೆಚ್ಚಿಗೆ ಖರ್ಚು ಆದರೂ ಪರವಾಗಿಲ್ಲ ಅವರನ್ನು ನೇಮಿಸಿ ಆಡಿಟ್ ಮಾಡಿಸಿ ಎಂದು

ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಮಂತ್ರಿಗಳವರು ತಮ್ಮ ಉತ್ತರದಲ್ಲಿ ಇದರ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಯಾವುದೇ ಸೊಸೈಟಿಯಾಗಲೀ ಆಡಿಟ್ ಆಗದೇ ಜನರಲ್ ಬಾಡಿ ಮೀಟಿಂಗ್ ಮಾಡತಕ್ಕದ್ದು ಸರಿಯಲ್ಲ. ಇವತ್ತು ಸರ್ಕಾರದ ಅಂಕಿಅಂಶಗಳನ್ನೆ ನಾವು ನೋಡುವುದಾದರೆ ೧೯೭೭–೭೮ನೇ ವರ್ಷವನ್ನು ಸಹಕಾರಿ ವರ್ಷವೆಂದು ಆಚರಿಸಿ ಇನ್ನು ಒಂದು ವರ್ಷವಾಗಿಲ್ಲ ಅಂಥಾದರಲ್ಲಿ ಇನ್ನು ೩೦ ಪರ್ಸೆಂಟ್ ಆಡಿಟ್ ಆಗದೇ ಉಳಿದಿದೆ ಎಂದರೆ ಇದು ಆಗಬಾರದು. ೪೪೧ ಪ್ರಕಾರ ಆಡಿಟ್ ಮಾಡುತ್ತಾರೆ ಕೋಕರನ್ಸ್ ಆಡಿಟ್ ಮಾಡುತ್ತಾರೆ ಆಡಿಟ್ ಸ್ಟಾಪ್ ಆಗಲೀ ಯಾರೇ ಆಗಲೀ ಯಾವುದೇ ರೀತಿಯಲ್ಲಿ ಆಗಲೀ ೧ ವರ್ಷಕ್ಕೆ ಮೊದಲೇ ಕ್ವಾರ್ಟರ್‌ಲ್ಲಿ ಅಂದರೆ ಜೂನ್‌ನಿಂದ ಜುಲೈ ೩೦ರೊಳಗೆ ಮತ್ತು ಡಿಸೆಂಬರ್ ಕೊನೆ ಹೊತ್ತಿಗೆ ಮೂರನೆ ಕ್ವಾರ್ಟರ್‌ಲ್ಲಿ ಆಡಿಟ್ ಆಗಿರಬೇಕು ಅಂದರೆ ೯ ತಿಂಗಳ ಆಡಿಟ್ ಆಗಿರಬೇಕು. ಇನ್ನು ಬಾಕಿ ೩ ತಿಂಗಳು ಬೇಕಾದರೆ ಮುಂದಿನ ವರ್ಷಕ್ಕೆ ಸೇರಿಸಿಕೊಳ್ಳಬಹುದು. ಅಂತೂ ಆಡಿಟ್ ಆ ವರ್ಷದಜನರಲ್ ಬಾಡಿ ಮೀಟಿಂಗ್ ಆಗುವುದರೊಳಗೇ ಮಾಡುವಂತೆ ವ್ಯವಸ್ಥೆ ಮಾಡಬೇಕು. ಇನ್ನೊಂದು ನಿಯಮವನ್ನು ಹಾಕಿದ್ದೀರಿ ಸೆಪ್ಟೆಂಬರ್ ತಿಂಗಳೊಳಗೇ ಜನರಲ್ ಬಾಡಿ ಮೀಟಿಂಗ್ ನಡೆಯಬೇಕು ಎನ್ನುವ ತಕ್ಕದ್ದನ್ನು ಮಾಡಿದ್ದೀರಿ ಸೆಪ್ಟೆಂಬರ್ ಇಲ್ಲದೇ ಹೋದರೆ ಡಿಸೆಂಬರ್ ಒಳಗೆ ಮಾಡಲು ಅವಕಾಶ ಕೊಡಿ. ಇದನ್ನು ಮಾಡದೇ ಇರುವುದರಿಂದ ಇವತ್ತು ಸರ್ಕಾರಕ್ಕೆ ಸಹಕಾರ ಕ್ಷೇತ್ರದಲ್ಲಿ ನಂಬಿಕೆ ಇಲ್ಲ. ವಿಶ್ವಾಸವಿಲ್ಲ ಎನ್ನುತಕ್ಕ ಮಾತನ್ನು ಈ ಸಂದರ್ಭದಲ್ಲಿ ಖಚಿತವಾಗಿ ಬಹಳ ಸಂಕಟಪಟ್ಟು ಈ ಮಾತನ್ನು ಹೇಳಬೇಕಾಗಿದೆ ಇನ್ನೊಂದು ವಿಷಯವೇನೆಂದರೆ ಈ ಆಡಿಟ್ ಇಲಾಖೆಯನ್ನೇನೂ ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಿದ್ದೀರಿ. ಆದರೆ ಯಾರು ಇತರೇ ಇಲಾಖೆಯಿಂದ ಈ ಇಲಾಖೆಗೆ ಬರುತ್ತಾರೋ ಅವರಿಗೆ ಸರಿಯಾದ ಪ್ರಾಪರ್ ಟ್ರೈನಿಂಗ್ ಆಗಿರುವುದಿಲ್ಲ. ಇದು ಒಂದು ತರಹ ತಾಂತ್ರಿಕ ಇಲಾಖೆ ಇದ್ದ ಹಾಗೆ, ಇವತ್ತು ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ಆಡಿಟರ್ಸ್‌ಗಳೇನಿದ್ದಾರೆ ಅವರಿಗೆ ಸರಿಯಾಗಿ ಒಂದು ಬ್ಯಾಲನ್ಸ್ ಶೀಟ್ ತಯಾರು ಮಾಡುವುದಕ್ಕೆ ಬರುವುದಿಲ್ಲ. ಆಗ ಅವರು ಲೆಕ್ಕ ಪತ್ರ ಪುಸ್ತಕಗಳನ್ನು ಹೊರಗಡೆ ತೆಗೆದುಕೊಂಡು ಹೋಗಕೂಡದೆಂದು ಇದ್ದರೂ ತೆಗೆದುಕೊಂಡು ಹೋಗಿ ಬೇರೆಯವರಿಂದ ಬ್ಯಾಲನ್ಸ್ ಶೀಟನ್ನು ತಯಾರಿಸಿ ಕೊಡುತ್ತಿದ್ದಾರೆ. ಇದು ಒಂದು ದುರಾದೃಷ್ಟಕರವಾದ ಪರಿಸ್ಥಿತಿ ಎಂದು ಹೇಳಬೇಕಾದರೆ ಅದೇ ನೀವು ಕಮರ್ಷಿಯಲ್ ಬ್ಯಾಂಕುಗಳಲ್ಲಿ ನೋಡಿದರೆ ಅಲ್ಲಿ ಅವರಿಗೆ ಪ್ರಾಪರ್ ಟ್ರೈನಿಂಗನ್ನು ಕೊಟ್ಟಿರುತ್ತಾರೆ. ತಾವು ಕೂಡ ಜೆ.ಡಿ.ಸಿ. ಮತ್ತು ಎಚ್.ಡಿ.ಸಿ. ಇದೆಂದು ಎಂದು ಹೇಳಬಹುದು. ಆದರೂ ಕೂಡ ಆಡಿಟ್ ಸಿಬ್ಬಂದಿ ವರ್ಗದವರನ್ನು ಉತ್ತಮ ಪಡಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಾಮಕರಣ ವಿಷಯ ಹೇಳುವುದಾದರೆ, ನಮ್ಮ ಶ್ರೀ ದೇವರಾಜ್ ಅರಸ್‌ರವರ ಸರ್ಕಾರ ಬಂದ ಮೇಲೆ ಕಳೆದ ೪ ವರ್ಷಗಳಿಂದ ನಾಮಕರಣಪದ್ಧತಿಯನ್ನು ತಾವು ಜಾರಿಗೆ ತಂದಿದ್ದೀರಿ. ಇವತ್ತಿನ ದಿವಸ ನೀವು ನಿಜವಾಗಿಯೂ ಸಹಕಾರ ಚಳುವಳಿಯನ್ನು ಉತ್ತಮಪಡಿಸಬೇಕಾಗಿದ್ದರೆ, ಅದರ ಬಗ್ಗೆ ಕಳಕಳಿ ಇದ್ದರೆ ಇದನ್ನು ಬದಲಾವಣೆ ಮಾಡಬೇಕಾಗಿದೆ.

ಒಬ್ಬ ಸದಸ್ಯರು.—ಅದರ ಉಪಯೋಗ ನಿಮಗೇ ಹೆಚ್ಚಾಗಿ ಆಗುತ್ತಿದೆ.

ಶ್ರೀ ಎಚ್.ಡಿ. ಚೌಡಯ್ಯ.—ಇಲ್ಲ ಸಹಕಾರ ಕ್ಷೇತ್ರದಲ್ಲಿ ನಾವು ಅದನ್ನು ಬಯಸಿಲ್ಲ. ಕಳೆದ ಸಾರಿ ನಾವು ಈ ಬಗ್ಗೆ ಮಾತನಾಡತಕ್ಕ ಕಾಲದಲ್ಲಿ ಹೇಳಿದ್ದ ಈ ಒಂದು ನಾಮಕರಣ ಪದ್ಧತಿ ಸರ್ಕಾರ ಏನು ತಂದಿದೆ ಅದರ ಬಗ್ಗೆ ಹೇಳಿದ್ದೇನೆ. ಇದರ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿ ಅದರಿಂದ ಈ ಕ್ಷೇತ್ರಕ್ಕೆ ಎಷ್ಟು ಅನುಕೂಲವಾಗಿದೆಯೇ ಅಥವಾ ಅನಾನುಕೂಲವಾಗಿದೆಯೇ ಎಂಬುದನ್ನು ತಮ್ಮ ಆಯವ್ಯಯ ಪತ್ರದಲ್ಲಿ ಅವರು ಹೇಳಿಲ್ಲ. ಅನುಕೂಲವಾಗಿದ್ದರೆ ಅದನ್ನು ಹೇಳುತ್ತಿದ್ದರು. ಆದರಿಂದ ಅದರ ಬಗ್ಗೆ ಹೇಳಲಿಕ್ಕೆ ಅವರಿಗೆ ಎದೆಗಾರಿಕೆ ಇಲ್ಲ. ಈಗ ೯ ಜನ ಇರತಕ್ಕಂಥ ಕ್ಷೇತ್ರದಲ್ಲಿ ಮೇಜರಾಗಿ ಎಲೆಕ್ಟೆಡ್ ಡೈರೆಕ್ಟರ್ಸ್‌ಗಳು ಇರುತ್ತಾರೆ. ಆದರೆ ಅಲ್ಲ. ಆಫೀಸ್ ಬೇರರ್ಸ್ ಎಲೆಕ್ಟ್ ಆಗುವುದಕ್ಕೆ ಮುಂಚೆ ಅಂದರೆ ೨೪ ಗಂಟೆ ಮುಂಚೆ ಸರ್ಕಾರ ನಾಮಕರಣ ಮಾಡಿ ಕಳುಹಿಸಿದ್ದಾರೆ ಇದರಿಂದ ನಿಜವಾಗಿಯೂ ನಾಮಕರಣ ಮಾಡತಕ್ಕ ಸದಸ್ಯರೇನಿದ್ದಾರೆ ಅವರೆಲ್ಲಾ ಶಿಖಂಡಿಗಳೇ ಆಗಿರುತ್ತಾರೆ ಅಂಥವರನ್ನು ಹಾಕಿದ್ದಾರೆ.

ಒಬ್ಬ ಸದಸ್ಯರು.—ಅವರೆಲ್ಲಾ ನಿಮ್ಮ ಕಡೆಗೇ ಬಂದಿದ್ದಾರೆ.

ಶ್ರೀ ಎಚ್. ಡಿ. ಚೌಡಯ್ಯ.—ನಾವು ಯೋಧರು, ನಾವು ಆದನ್ನು ಬಯಸಿಲ್ಲ. ಆ ರೀತಿ ಶಿಖಂಡಿಗಳಾಗಿರತಕ್ಕಂಥವರನ್ನು ಯುದ್ಧಕ್ಕೆ ಬಂದಾಗ ಭೀಷ್ಮಾಚಾರ್ಯರು ಯುದ್ಧದಿಂದ ವಿಮುಖರಾಗಿ ಬಿಡು

ತ್ತಾರೆ. ಆ ರೀತಿ ಮಾಡಿ ಇವತ್ತು ಸಹಕಾರ ಕ್ಷೇತ್ರ ವಿಮುಖರಾಗುವ ಹಾಗೆ ಮಾಡಿ ದೊಡ್ಡ ಅನಾ ಹುತವಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ನಮ್ಮ ಪಕ್ಷದ ಯಾರೋ ಒಬ್ಬ ಸದಸ್ಯರು ಮಾತನಾಡುತ್ತಾ ಇರುವಾಗ ಮಾನ್ಯ ಮಂತ್ರಿಗಳವರು ಇದು ಒಂದು ಆಲ್ ಇಂಡಿಯಾ ಪಾಲಿಸಿ ಅಂತ ಹೇಳಿದರು. ಆದರೆ ನಾನು ಹೇಳುತ್ತೇನೆ ಮಾನ್ಯ ಮುಖ್ಯಮಂತ್ರಿಗಳವರು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ ನಾವು ಕೆಲವು ಪ್ರೊಗ್ರೆಸಿವ್ ಮೆಜರ್ಸ್ ಏನು ಹಾಕಿಕೊಂಡಿದ್ದೇವೆ ಅದನ್ನು ಬೇರೆ ಯಾವ ರಾಜ್ಯಗಳವರು ಹಾಕಿಕೊಂಡು ಮಾಡಿಲ್ಲ ಅಂತ ಎದೆ ಚಾಚಿ ಹೇಳಿದ್ದಾರೆ. ಹೀಗಿರುವಾಗ ಈ ನಾಮಕರಣ ಪದ್ಧತಿ ಏನಿದೆ, ಈ ದುಷ್ಟ ಪದ್ಧತಿಯನ್ನು ಬಿಟ್ಟು ನೇರವಾಗಿ ಪ್ರಜಾಪ್ರಭುತ್ವದಲ್ಲಿ ಜನಗಳಿಂದ ಚುನಾಯಿತರಾಗಿ ಆಯ್ಕೆ ಆಗತಕ್ಕವರಿಗೆ ಅಧಿಕಾರವನ್ನು ನಡೆಸಲು ಅವಕಾಶವನ್ನು ಮಾಡಿಕೊಡಿ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

SRI A. LAKSHMI SAGAR. —It is understood that the debate would not be concluded to day.

SRI V. M. KUSHNOOR,— The agenda shows that it should be concluded today.

SRI A LAKSHMI SAGAR..—It is true. But later it has transpired that as there are many members on both the sides desires to speak this is going to be taken up at the next sitting of the House. There would be ten days recess and we need not be in a hurry.

SRI V. M. KUSHNOOR.—I do not want to come in the way of discussion. At least let the discussion be over today.

SRI A. LAKSHMI SAGAR.—The Hon. Minister has not lost a single opportunity to impress on the members that the Department of Co-operation is vital for the progress of the society. Therefore having regard to the importance of the department, some more members may be given time to take part in the discussion.

SRI V. M. KUSHNOOR.—I do not come in the way. The House will have to be managed by the Chair. At least let the discussion be over today.

MADAM DEPUTY SPEAKER.—We will sit for one more hour and close the discussion and reply will be given when we meet again.

SRI A. LAKSHMI SAGAR.—The hon. members of this House are scheduled to leave by various modes of transport. If you extend the time of sitting they will be put to great hardship. They have reserved accommodation. If the House were to sit for one more hour without their notice, it would be difficult. So the discussion can continue on the next day and Minister can reply on the same day.

೧೨.೩೦ ಪಿ. ಎಂ.

ಶ್ರೀ ಹೆಚ್. ಡಿ. ಚೌಡಯ್ಯ.— ಎನ್‌ಕ್ವೈರಿ ಮತ್ತು ಇನ್ಸ್‌ಪೆಕ್ಷನ್ಸ್ ವಿಷಯದಲ್ಲಿ ಹೇಳುವುದಾದರೆ, ಇಲ್ಲಿ ಕೊಟ್ಟಿರತಕ್ಕ ವರದಿಯ ಪ್ರಕಾರ ಸಾರ್ವಜನಿಕರಿಗೆ ಬರತಕ್ಕ ದೂರುಗಳನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಪ್ರತ್ಯೇಕವಾದ ಸೆಲ್ ಇದೆ. ಆ ಸೆಲ್ಲಿಗೆ ಎಷ್ಟು ಅರ್ಜಿಗಳು ಬಂದಿವೆ, ಎಷ್ಟು ವಿಲೇವಾರಿಯಾಗಿವೆ ಮತ್ತು ಎಷ್ಟು ಪೆಂಡಿಂಗ್ ಇವೆ ಎಂಬುದನ್ನು ಹೇಳಿದ್ದಾರೆ. ನಾನು ಕಾರ್ಯಕರ್ತನಾಗಿ ಹೇಳು

ವುದಾದರೆ ಇದು ಮುಖ್ಯವಾದ ವಿಷಯವಲ್ಲ. ಈ ಒಂದು ಇಲಾಖೆಯಲ್ಲಿ ಏನೊಂದು ನಿಯಮ ಇದೆಯೋ ಆ ಪ್ರಕಾರ ಸೊಸೈಟಿಗಳ ಸೂಪರ್‌ವಿಷನ್ ಮತ್ತು ಇನ್ಸ್‌ಪೆಕ್ಷನ್ ಸಮರ್ಪಕವಾಗಿ ನಡೆಯುತ್ತಿದೆಯೇ ಎಂಬ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳಿಗೆ ಹಾಕಬೇಕಾಗಿದೆ. ಇತ್ತೀಚೆಗೆ ಮಾನ್ಯ ಮಂತ್ರಿಗಳು ಪ್ರತಿ ಡಿವಿಜನ್ ಮಟ್ಟದಲ್ಲೂ ಕೂಡ ಸಂಬಂಧಪಟ್ಟ ಅಧಿಕಾರಿಗಳನ್ನು, ಪ್ರಮುಖ ಸಮಿತಿಗಳ ಪ್ರತಿನಿಧಿಗಳನ್ನು ಕರೆದು ರೆವ್ಯೂ ಮಾಡುತ್ತಿದ್ದಾರೆ ಬಹಳ ಸಂತೋಷ. ಈ ಇಲಾಖೆಯಲ್ಲಿ ಸೂಪರ್ ವಿಷನ್ ಮತ್ತು ಇನ್ಸ್‌ಪೆಕ್ಷನ್ ಎಂಬುದು ಮೊದಲಿನಿಂದ ಇರತಕ್ಕ ಒಂದು ಪದ್ಧತಿ. ಸಿ. ಇ. ಓ ಇಂದ ಹಿಡಿದು ರಿಜಿಸ್ಟ್ರಾರ್‌ವರೆಗೆ ಕೂಡ ಇನ್ಸ್‌ಪೆಕ್ಷನ್ ಮಾಡಬೇಕೆಂಬ ನಿಯಮ ಇದೆ ನಾನು ಈಗ ಹಳ್ಳಿ ಮಟ್ಟದ ಸಹಕಾರ ಸಂಘಗಳ ಬಗ್ಗೆ ಹೇಳುತ್ತೇನೆ, ಇದು ಬಹಳ ಮುಖ್ಯವಾದುದಾದ್ದರಿಂದ ಮಾನ್ಯ ಮಂತ್ರಿಗಳು ಈ ಕಡೆ ಸ್ವಲ್ಪ ಲಕ್ಷ್ಯ ಕೊಟ್ಟು ಕೇಳಬೇಕು. ಇದರಲ್ಲಿ ಸಹಕಾರ ಸಂಘಗಳ ಸೂಪರ್‌ವಿಷನ್ ಮತ್ತು ಇನ್ಸ್‌ಪೆಕ್ಷನ್ ಬಹಳ ಮುಖ್ಯವಾದುದು. ಈ ಇಲಾಖೆಯಲ್ಲಿ ಅನೇಕ ಮಂದಿ ಹಿರಿಯ ಅಧಿಕಾರಿಗಳು ಇದ್ದಾರೆ. ಸಾಮಾನ್ಯವಾಗಿ ಅವರೆಲ್ಲರೂ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಅವರ ಸರ್ವೀಸನ್ನು ಪ್ರಾರಂಭ ಮಾಡಿದವರೆ. ಅವರು ಯಾವ ರೀತಿ ಸಹಕಾರ ಸಂಘಗಳ ಇನ್ಸ್‌ಪೆಕ್ಷನ್ ಮತ್ತು ಸೂಪರ್‌ವಿಷನ್ ಮಾಡುತ್ತಿದ್ದರು. ಇವತ್ತಿನ ದಿವಸ ಯಾವ ರೀತಿ ನಡೆಯುತ್ತಿದೆ ಎಂದು ನೋಡಿದರೆ ಬಹುಶಃ ಆ ಒಂದು ಗುಣಮಟ್ಟ ಇಲ್ಲ. ಇವತ್ತಿನ ದಿವಸ ಯಾವ ಸಿ. ಇ. ಓ ಆಗಲಿ ಒಂದು ತಿಂಗಳಲ್ಲಿ ಎಷ್ಟು ಸೊಸೈಟಿಗಳ ಇನ್ಸ್‌ಪೆಕ್ಷನ್ ಮಾಡಬೇಕೆಂದು ಗೊತ್ತು ಪಡಿಸಿರುತ್ತಾರೋ ಅಷ್ಟನ್ನು ಮಾಡುತ್ತಿಲ್ಲ. ಅದೇ ರೀತಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಲೀ, ಡೆಪ್ಯೂಟಿ ರಿಜಿಸ್ಟ್ರಾರ್ ಆಗಲಿ ಮಾಡುತ್ತಿಲ್ಲ. ಜಾಯಿಂಟ್ ರಿಜಿಸ್ಟ್ರಾರ್ ಅವಕಾಶ ಸಿಕ್ಕಿದರೆ ಜಿಲ್ಲಾ ಮಟ್ಟದ ಬ್ಯಾಂಕಾಗಲಿ, ಸಂಸ್ಥೆಯಾಗಲಿ ಇದ್ದರೆ ಮಾಡಬಹುದು, ಬಿಡಬಹುದು. ಇದು ನಮ್ಮ ಅನುಭವ. ಒಂದು ವೇಳೆ ಏನಾದರೂ ಮಾ ತಿಗಳು ಇದ್ದ ಪಕ್ಷದಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟೆಷ್ಟು ಸೊಸೈಟಿಗಳನ್ನು ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರ್ ಇಂದ ಹಿಡಿದು ರಿಜಿಸ್ಟ್ರಾರ್‌ವರೆಗೆ ಇನ್ಸ್‌ಪೆಕ್ಷನ್ ಮಾಡಿದ್ದಾರೆ ಮತ್ತು ರಿಪೋರ್ಟ್ ಕೊಟ್ಟಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬಹುದೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೋ-ಆಪರೇಟಿವ್ ಷುಗರ್ ಫ್ಯಾಕ್ಟರಿಗಳ ವಿಷಯದಲ್ಲಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಒಂದು ಕೋ-ಆಪರೇಟಿವ್ ಷುಗರ್ ಫ್ಯಾಕ್ಟರಿ ಇದೆ. ಮಂಡ್ಯದಲ್ಲಿ ಇರುವ ಮೈಸೂರು ಸಕ್ಕರೆ ಕಾರ್ಖಾನೆಯು ಜಾಯಿಂಟ್ ಸ್ಟಾಕ್ ಕಂಪನಿ ಇತ್ತೀಚೆಗೆ ಕೆಲವು ತಿಂಗಳುಗಳಿಂದ ಕೋಟಿಗಟ್ಟಲೆ ನಷ್ಟವನ್ನು ಅನುಭವಿಸಿದೆ. ಇದಕ್ಕೆ ಕಾರಣ ಯಾರು ಎಂದರೆ ಸರ್ಕಾರ. ಸರ್ಕಾರವೇ ಯೋಚನೆ ಮಾಡುತ್ತಿದೆ ಇದನ್ನು ಸಹಕಾರ ಕ್ಷೇತ್ರಕ್ಕೆ ಕನ್‌ವರ್ಟ್ ಮಾಡಬೇಕೆಂದು. ಒಂದು ವೇಳೆ, ಸರ್ಕಾರಕ್ಕೆ ಈ ಸಕ್ಕರೆ ಕಾರ್ಖಾನೆಯನ್ನು ರಿವೈವ್ ಮಾಡಬೇಕೆಂಬ ಕಳಕಳಿ, ನಂಬಿಕೆ, ವಿಶ್ವಾಸ ಇದ್ದ ಪಕ್ಷದಲ್ಲಿ ದಯಮಾಡಿ ಕೂಡಲೇ ಈ ಒಂದು ಸಕ್ಕರೆ ಕಾರ್ಖಾನೆಯನ್ನು ಸಹಕಾರ ಕ್ಷೇತ್ರಕ್ಕೆ ಪರಿವರ್ತನೆ ಮಾಡತಕ್ಕದ್ದು ಸೂಕ್ತವೆಂದು ಹೇಳುತ್ತಾ, ಅದಕ್ಕೆ ಸ್ಥಳೀಯ ಜನಗಳಿಂದ ಏನು ಒಂದು ವಂತಿಗೆ ಬೇಕು, ಸಹಕಾರ ಬೇಕು ಅದನ್ನು ಕೊಡುವುದಕ್ಕೆ ಸಿದ್ಧನಿದ್ದೇನೆಂದೂ ಸದನದಲ್ಲಿ ತಮ್ಮ ಮೂಲಕ ಭರವಸೆ ನೀಡಲು ಇಷ್ಟಪಡುತ್ತೇನೆ. ಈ ಒಂದು ದಿಕ್ಕಿನಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ವಿಷಯದಲ್ಲಿ ಹೇಳುವುದಾದರೆ, ಮಾನ್ಯ ಜಕನೂರ್‌ರವರು ಸ್ವಲ್ಪ ಮಟ್ಟಿನ ಆಸಕ್ತಿ ವಹಿಸಿದ್ದಾರೆ. ಕಳೆದ ೩-೪ ತಿಂಗಳ ಹಿಂದೆ ಮಂಡ್ಯಕ್ಕೆ ಸೈಟ್ ಸೆಲೆಕ್ಷನ್ ವಿಷಯದಲ್ಲಿ ಅವರು ಮತ್ತು ಛೀಫ್ ಮಾರ್ಕೆಟಿಂಗ್ ಆಫೀಸರ್ ಬಂದು ಹಣವನ್ನು ತುಂಬಿದ್ದಾರೆ. ಆ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ರೆಗ್ಯುಲೇಟೆಡ್ ಸೆಸ್ ಹಾಕಿರುವ ಬಗ್ಗೆ ಕಳೆದ ವರ್ಷವೇ ಹೇಳಿದ್ದೇನೆ, ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡನ್ನು ರಚನೆ ಮಾಡದೆ, ರೈತರಿಗೆ ಅವಶ್ಯಕ ಅನುಕೂಲಗಳನ್ನು ಮಾಡಿ ಕೊಡದೆ ಸೆಸ್ಸನ್ನು ಕಲೆಕ್ಟ್ ಮಾಡತಕ್ಕ ನೈತಿಕ ಹಕ್ಕು ಸರ್ಕಾರಕ್ಕೆ ಇಲ್ಲ ಎಂದು, ಇವತ್ತು ಅದೇ ಮಾತನ್ನು ಹೇಳಂತ್ತಿದ್ದೇನೆ. ತ್ವರಿತಗತಿಯಿಂದ ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡನ್ನು ನಿರ್ಮಾಣ ಮಾಡತಕ್ಕ ಕಾರ್ಯಸರ್ಕಾರದ ವತಿಯಿಂದ ಆಗಿ ಆ ಪ್ರದೇಶದ ಜನತೆಗೆ ಹೆಚ್ಚಿನ ಪ್ರಯೋಜನವಾಗಬೇಕೆಂದು ಹೇಳುತ್ತೇನೆ. ಇನ್ನು ಗೋಡೌನ್‌ಗಳ ವಿಚಾರದಲ್ಲಿ ಹೇಳುವುದಾದರೆ, ಸರ್ಕಾರ ಮಾಸೀವ್ ಪ್ರೋಗ್ರಾಂ ಹಾಕಿದೆ. ಇನ್‌ಕಂಪ್ಲೀಟೆಡ್ ಗೋಡೌನ್ಸ್ ಬಹಳ ಇವೆ. ಅವನ್ನು ಸರ್ಕಾರದ ಗಮನಕ್ಕೆ ಅನೇಕ ಸಂದರ್ಭಗಳಲ್ಲಿ ತಂದಿದ್ದೇನೆ. ಈಗ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ; ಅದೇನೆಂದರೆ, ಮಿಷ್ಕಿ ಪ್ರದೇಶಗಳಲ್ಲಿ ೧೦೦ ಟನ್ ಕ್ಯಪಾಸಿಟಿಯ ಗೋಡೌನ್ ಕೊಡಿ ಎಂದು ಸುಮಾರು ೨೦ ವರ್ಷಗಳಿಂದ ಹೇಳುತ್ತಿದ್ದೇನೆ. ಅಂಥ ಕಡೆ ಸುಮ್ಮನೆ ೫೦೦-೧೦೦೦ ಟನ್ ಕ್ಯಪಾಸಿಟಿಯ ಗೋಡೌನ್ ಕೊಟ್ಟು

(ಎಲ್ಲಿ ಧಾನ್ಯ ಸಂಗ್ರಹಣೆ ಮಾಡತಕ್ಕ ಅವಶ್ಯಕತೆ ಇಲ್ಲವೋ ಅಂಥ ಕಡೆ ಗೋಡೌನ್ ಕೊಟ್ಟು) ಅವುಗಳಲ್ಲಿ ಕತ್ತೆ-ಕುರಿಗಳು ಸೇರುವುದಕ್ಕೆ ಅವಕಾಶ ಮಾಡಬೇಡಿ ಎಂದು ಹಿಂದೆಯೇ ಹೇಳಿದ್ದೇನೆ. ಈಗಲೂ ಹೇಳುತ್ತೇನೆ, ಖುಷ್ಕಿ ಜಮೀನು ಇರುವ ಕಡೆ ಅಂದರೆ ಎಲ್ಲಿ ನೀರಾವರಿ ಪ್ರದೇಶಗಳಿಲ್ಲವೋ ಅಂಥ ಕಡೆ ೧೦೦೦ ಟನ್ ಕೃಪಾಸಿಟಿ ಗೋಡೌನ್ ಕೊಡುವುದು ಬೇಡ ಎಂದು. ಅವರಿಗೆ ಅಷ್ಟೊಂದು ಕೃಪಾಸಿಟಿಯ ಗೋಡೌನ್ ಕಟ್ಟಿಸಿಕೊಟ್ಟರೆ ಅವರು ಆ ಸಾಲವನ್ನು ತೀರಿಸುವುದಾದರೂ ಹೇಗೆ? ಅವರಿಗೆ ಆದರ ಮೇಲಿನ ಬಡ್ಡಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟೊಂದು ಹಣವನ್ನು ವಾಪಸ್ಸು ಮಾಡಲು ಆ ಹಳ್ಳಿಯ ಸಹಕಾರ ಸಂಘಕ್ಕೆ ಸಾಧ್ಯವಾಗುತ್ತಿಲ್ಲವೆಂಬ ಮಾತನ್ನು ಹೇಳುತ್ತಾ ಮತ್ತೊಂದು ಹೊಸದಾಗಿ ಕೈಗೊಂಡಿರತಕ್ಕ ಯೋಜನೆಯ ಬಗ್ಗೆ ಪ್ರಸ್ತಾಪಿಸಬಯಸುತ್ತೇನೆ. ಅದೇನೆಂದರೆ ವೇತನ ಕಾರ್ಯದರ್ಶಿಗಳಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡತಕ್ಕದ್ದು. ಅದನ್ನು ನಾನು ಸ್ವಾಗತಿಸುತ್ತೇನೆ. ಅದು ಬಹಳ ಒಳ್ಳೆಯ ಯೋಜನೆ. ಆದರೆ ಆ ಯೋಜನೆ ಯಾವ ರೀತಿ ಕಾರ್ಯಗತವಾಗುತ್ತದೆ? ಈ ವರ್ಷದ ಬಜೆಟ್ಟಿನಲ್ಲಿ ಅದಕ್ಕೆ ಎಷ್ಟು ಹಣವನ್ನು ಮೀಸಲಾಗಿಟ್ಟಿದ್ದೀವೆ ಎಂದು ಏನೂ ಹೇಳದೇ ಮೊಗಮ್ಮಾಗಿ ವಸತಿ ಗೃಹಗಳನ್ನು ಕಟ್ಟಿಸಿಕೊಡತಕ್ಕ ಯೋಜನೆಯನ್ನು ಕೈಗೊಂಡಿದ್ದೇವೆಂದು ಹೇಳಿದ್ದಾರೆ. ಮುಖಕ್ಕೆ ತುಪ್ಪ ಸವರಿ ನೆಕ್ಕು ಎಂದ ಹಾಗೆ ಆಗಿದೆ. ಆ ರೀತಿ ಆಗಬಾರದು. ಇಷ್ಟು ವಸತಿಗೃಹಗಳನ್ನು ಕಟ್ಟಿಸಿ ಕೊಡುತ್ತೇವೆ, ಅದಕ್ಕಾಗಿ ಇಷ್ಟು ಹಣವನ್ನು ಇಟ್ಟಿದ್ದೇವೆ, ಆ ಬಗ್ಗೆ ಸರ್ಕಾರದ ಧೋರಣೆ ಈ ರೀತಿ ಇದೆ ಎಂದು ಸದನದ ಮುಂದೆ ಇಡಬಹುದಿತ್ತು ಎಂಬ ಮಾತನ್ನು ಹೇಳುತ್ತಾ. ಇನ್ನು ಹೆಚ್ಚು ಕಾಲವನ್ನು ತೆಗೆದುಕೊಳ್ಳದೆ, ಸಹಕಾರ ಕ್ಷೇತ್ರ ಗುಣಮಟ್ಟದಲ್ಲಿ ಬೆಳೆಯಬೇಕಾದರೆ ಅದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ ಎಂದು ಹೇಳಿ. ನಾಮಕರಣ ಪದ್ಧತಿ ಏನು ಇದೆ ಅದನ್ನು ಸರ್ಕಾರ ಕೈಬಿಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಈಗಾಗಲೇ ಯೂನಿವರ್ಸಲ್ ಮೆಂಬರ್ಶಿಪ್‌ಗೆ ಒಪ್ಪಿಸಲಾಗಿದೆ. ಅದೇ ರೀತಿ ಎಲ್ಲ ಕಡೆ ಸದಸ್ಯರಾಗಿದ್ದಾರೆ. ಆದರೆ ಆಡಳಿತ ಪಕ್ಷದ ಸದಸ್ಯರಿಗೆ ಮತ್ತು ಮಂತ್ರಿಗಳಿಗೆ ಏನು ಭಯವೋ ಗೊತ್ತಿಲ್ಲ. ಪುಂಡ್ಕದಲ್ಲಿ ತಾಲ್ಲೂಕು ಮಟ್ಟದ ಸಹಕಾರ ಸಂಘದ ಚುನಾವಣೆ ನಡೆಯಿತು. ಅದಕ್ಕೆ ೬ ವರ್ಷಗಳ ಕಾಲ ಆಡ್ಮಿನಿಸ್ಟ್ರೇಟರನ್ನು ಇಟ್ಟಿದ್ದರು. ೫ ವರ್ಷದ ಮೇಲೆ ಇಡುವುದಕ್ಕೆ ಸಾಧ್ಯವಿಲ್ಲ. ಆ ಪಕ್ಷದವರೆಲ್ಲ ಮಾನ್ಯ ಮುಖ್ಯ ಮಂತ್ರಿಗಳ ಮನೆ ಮುಂದೆ ಮತ್ತು ವಿಧಾನ ಸೌಧದ ಮುಂದೆ ಕ್ಯಾಂಪ್ ಮಾಡಿ ಇನ್ನೊಂದು ವರ್ಷ ಎಕ್ಸ್‌ಟೆಂಡ್ ಮಾಡಿ ಎಂದು ಒತ್ತಾಯಿಸಿದರು. ಅದಕ್ಕೆ ಕಾರಣ ಏನೆಂದರೆ ಚುನಾವಣೆಯಲ್ಲಿ ನಾವು ಗೆಲ್ಲುವುದಕ್ಕಾಗುವುದಿಲ್ಲ ಎಂದು. ಸಹಕಾರ ಕ್ಷೇತ್ರದಲ್ಲಿ ಯಾರಿಗೆ ನಂಬಿಕೆ ಇದೆ, ವಿಶ್ವಾಸ ಇದೆ ಅಂಥ ಜನರನ್ನು ನಿಲ್ಲಿಸಲಾಗಿ ೧೩ ಮಂದಿಯೂ ಗೆದ್ದು ಬಂದಿದ್ದಾರೆ. ಇಂಥ ಕಡೆ ಯಾರು ಒಳ್ಳೆಯ ಕೆಲಸ ಮಾಡುತ್ತಾರೋ ಅಂಥವರಿಗೆ ಪುರಸ್ಕಾರ ಕೊಡಬೇಕು. ಅದು ಸರ್ಕಾರದ ಮೂಲ ಕರ್ತವ್ಯ ಎಂದು ಹೇಳುತ್ತೇನೆ. ಇನ್ನಾದರೂ ಸಹಕಾರ ರಂಗದಲ್ಲಿ ರಾಜಕೀಯ ಸಾಕು. ಯಾರೂ ಶಾಶ್ವತವಾಗಿ ಇರುವುದಿಲ್ಲ. ಕೇವಲ ೫-೧೦ ವರ್ಷಗಳ ಅವಧಿಯಲ್ಲಿ ಕಲುಷಿತ ವಾತಾವರಣವನ್ನು ಉಂಟು ಮಾಡಿ ಸಹಕಾರ ಸಂಘಗಳನ್ನು ಕೆಡಿಸಿದರೆ ಒಂದೆರಡು ಶತಮಾನಗಳು ಕಳೆದರೂ ಅವುಗಳನ್ನು ರಿವೈವ್ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ, ನಾನು ಸರ್ಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ನಾಮಕರಣ ಪದ್ಧತಿಯನ್ನು ದಯವಿಟ್ಟು ಕೈಬಿಡಿ ಮತ್ತು ಸಹಕಾರ ರಂಗದಲ್ಲಿ ರಾಜಕೀಯ ಪ್ರವೇಶಕ್ಕೆ ಅವಕಾಶ ಕೊಡಬೇಡಿ ಎಂದು. ಇಷ್ಟು ಹೇಳಿ, ಇದುವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಚೌಡಾರೆಡ್ಡಿ (ಚಿಂತಾಮಣಿ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿನ ಮಾನ್ಯ ಸಹಕಾರ ಸಚಿವರು ಇಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ನಿನ್ನೆ ದಿವಸ ಮಾನ್ಯ ಸದಸ್ಯರ ಪ ಶ್ರೀ ವೈ ರಾಮಕೃಷ್ಣರವರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಅವರು ಬೆಂಗಳೂರು ಡೈರಿ ಹಾಲು ಉತ್ಪಾದಕರ ಯೂನಿಯನ್ ಬಗ್ಗೆ ಹೇಳುತ್ತಾ, ಡೈರಿಯಲ್ಲಿ ಸರ್ವಸದಸ್ಯರ ಸಭೆ ನಡೆಸುತ್ತಾರೆ ಕಾಫಿ, ತಿಂಡಿ, ಊಟ ಅಶೋಕ ಹೋಟಲಿನಲ್ಲಿ ಮಾಡುತ್ತಾರೆ. ಇದಕ್ಕಾಗಿ ೨೦ ಸಾವಿರ ರೂಪಾಯಿಗಳವರೆಗೆ ಖರ್ಚಾಗಿದೆ. ಇದಕ್ಕೆ ಒಂದು ಮಿತಿ ಬೇಡವೇ ಎಂದು ಅವರು ಹೇಳಿದ್ದಾರೆ. ನಾನು ಈ ಯೂನಿಯನ್ ಅಧ್ಯಕ್ಷನಾಗಿದ್ದೇನೆ. ಅವರು ಹೇಳಿರುವ ವಿಚಾರಗಳೆಲ್ಲಾ ಸತ್ಯವಾದರೆ ನಾನು ಇವತ್ತು ನನ್ನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರು ಇದ್ದೇನೆ. ಅವು ಸತ್ಯವಾಗದಿದ್ದರೆ ಮಾನ್ಯ ಸದಸ್ಯರು ರಾಜಿ ನಾಮೆಯನ್ನು ಕೊಡುತ್ತಾರೆಯೇ ಎಂಬುದನ್ನು ತಾವು ಕೇಳಿ. ಅವರು ಈ ಸಭೆಯಲ್ಲಿ ಸತ್ಯಕ್ಕೆ ದೂರವಾದ ವಿಚಾರಗಳನ್ನು ನೇರವಾಗಿ ಪ್ರಸ್ತಾಪ ಮಾಡಿ ಬೆಂಗ

ಳೂರು ಡೈರಿ ಹಾಲು ಉತ್ಪಾದಕರ ಯೂನಿಯನ್‌ಗೆ ಹೆಚ್ಚಿನ ರೀತಿಯಲ್ಲಿ ಕಳಂಕವನ್ನು ಉಂಟುಮಾಡು ವಷ್ಟರಮಟ್ಟಿಗೆ ಹೇಳಿದ್ದಾರೆ. ಮಾನ್ಯ ಸದಸ್ಯರು ಈಗತಾನೇ ಸಭೆಯಲ್ಲಿ ಇದ್ದರು, ಬಹುಷಃ ಹೊರಗಡೆ ಹೋಗಿದ್ದಾರೆ ಎಂದು ಕಾಣುತ್ತದೆ. ಮಾನ್ಯ ಅಧ್ಯಕ್ಷೆಣಿಯವರೇ, ಇವತ್ತು ನಾನು ಈ ಸಭೆಯ ಮುಂದೆ ಹೆ ಳುತ್ತೇನೆ, ಇದರಲ್ಲಿ ಯಾವತರದ ಲೋಪದೋಷಗಳಾಗಲೀ, ಅಥವಾ ಜನರಲ್ ಬಾಡಿ ಮೀಟಿಂಗ್ ಕರೆದು ಖರ್ಚು ಮಾಡಿರತಕ್ಕಂಥಾದರಲ್ಲಿ ಊಟಕ್ಕೆ ಆಗಲೀ ಯಾವುದಕ್ಕೇ ಆಗಲೀ ೨೫೦೦-೦೦ ರೂಪಾಯಿ ಗಳಿಗಿಂತ ಹೆಚ್ಚಿಗೆ ಖರ್ಚಾಗಿದ್ದರೆ ಇವತ್ತು, ನಾನು ಮೊದಲೇ ಹೇಳಿದಹಾಗೆ ರಾಜೀನಾಮೆಯನ್ನು ಕೊಡುವು ದಕ್ಕೆ ತಯಾರು ಇದ್ದಾನೆ. ಇಂತಹದರಲ್ಲಿ ಯಾರೋ ಕೆಲವರು ಹೇಳಿದ್ದನ್ನು ಕೇಳಿಕೊಂಡು ಬಂದು ಮಾನ್ಯ ಸದಸ್ಯರು ಈ ಸದನದಲ್ಲಿ ಗುರುತರವಾದ ಆರೋಪಗಳನ್ನು ಮಾಡಿರುವುದು ಒಳ್ಳೆಯದು ಎನ್ನಿಸು ವುದಿಲ್ಲ. ಮಾನ್ಯಸದಸ್ಯರು ಈ ಸಭೆಯಲ್ಲಿ ಇದ್ದಿದ್ದರೆ ಚನ್ನಾಗಿ ಇರುತ್ತಿತ್ತು. ಅದರಿಗಾಗಿ ಈ ಬಗ್ಗೆ ಅಂಕಿ ಅಂಶಗಳನ್ನು ಈ ಸಭೆಯ ಮುಂದಿಡುವುದಕ್ಕೆ ನಾನು ಇಚ್ಛಿಸುತ್ತೇನೆ. ಸ್ವಾಮಿ, ನಮ್ಮಲ್ಲಿ ೨೫೦ ಜನ ಸದಸ್ಯರಿದ್ದಾರೆ. ನನ್ನ ಅಧಿಕಾರಾವಧಿಯಲ್ಲಿ ಇಲ್ಲಿಯವರೆಗೆ ೨ ಜನರಲ್ ಬಾಡಿ ಮೀಟಿಂಗ್ಸ್ ಆಗಿದೆ. ದಿನಾಂಕ ೧೦ನೇ ಸೆಪ್ಟೆಂಬರ್ ೧೯೭೭ರಲ್ಲಿ ಒಂದು ಜನರಲ್ ಬಾಡಿ ಮೀಟಿಂಗ್ ಆಗಿದೆ. ನಂತರ ೨೪ನೇ ಅಕ್ಟೋಬರ್ ೭೮ರಲ್ಲಿ ಇನ್ನೊಂದು ಜನರಲ್ ಬಾಡಿ ಮೀಟಿಂಗ್ ಆಗಿದೆ. ೧೦ನೇ ಸೆಪ್ಟೆಂಬರ್ ೧೯೭೭ರಲ್ಲಿ ಆಗಿರತಕ್ಕಂಥ ಖರ್ಚು ಎಂದರೆ ಪೋಸ್ಟಿಂಗ್ ಆಫ್ ನೋಟಿಸ್‌ಗೆ ೬೩ರೂ ೭೦ಪೈಸೆ, ಲೌಡ್‌ಸ್ಪೀಕರ್ ಚಾರ್ಜಸ್‌ಗೆ ೪೦ರೂ ೧೫ಪೈಸೆ, ಚೇರ್ಸ್ ಮತ್ತು ಟಿಫನ್‌ಗಾಗಿ ೬೮೪ ರೂಗಳು. ಮತ್ತು ಪ್ರಿಂಟಿಂಗ್ ಆಫ್ ರಿಪೋರ್ಟ್ಸ್‌ಗೆ ೧೯೬೦ರೂಪಾಯಿಗಳಾಗಿದೆ. ಆ ವರ್ಷ ಅಷ್ಟು ಖರ್ಚಾಗಿದೆ. ನಂತರ ೨೪ನೆ ಅಕ್ಟೋಬರ್ ೧೯೭೮ರಲ್ಲಿ ಒಂದು ಜನರಲ್ ಬಾಡಿ ಮೀಟಿಂಗ್ ಆಗಿತ್ತು ಆ ದಿನ ಪ್ರಿಂಟಿಂಗ್ ಆಫ್ ರಿಪೋರ್ಟಿಂಗ್ ೭೬೭ರೂಪಾಯಿಗಳು, ಲೌಡ್‌ಸ್ಪೀಕರ್ ಚಾರ್ಜಸ್ಸು ೫೦ರೂಪಾಯಿಗಳು, ಚೇರ್ಸ್ ಅಂಡ್ ಟಿಫನ್ ಚಾರ್ಜಸ್‌ಗೆ ೧೦೨೬ ರೂಪಾಯಿಗಳು, ಮತ್ತು ಜನರಲ್ ಬಾಡಿ ಸದಸ್ಯರಿಗೆಲ್ಲ ಹಾಲು ಒದಗಿಸಿದ್ದಕ್ಕೆ ೧೫೦ ರೂಪಾಯಿಗಳಾಗಿದೆ. ಒಟ್ಟು ಆ ವರ್ಷದಲ್ಲಿ ೧೯೯೩ರೂಪಾಯಿಗಳಾಗಿದೆ. ಇಂಥಾದರಲ್ಲಿ ೨೦ ಸಾವಿರ ರೂಪಾಯಿಗಳನ್ನು ಜನರಲ್ ಬಾಡಿ ಮೀಟಿಂಗಿಗಾಗಿ ಖರ್ಚು ಮಾಡಿದ್ದಾರೆ, ಬೆಂಗಳೂರು ಡೈರಿಯಲ್ಲಿ ಮೀಟಿಂಗ್ ಮಾಡಿ ಅಶೋಕಾ ಹೋಟಲಿನಲ್ಲಿ ಕಿಂಡಿ, ಊಟ, ಕಾಫಿ ಮಾಡಿದ್ದಾರೆ ಎಂದು ಮಾನ್ಯ ಸದ ಸ್ಯರು ಹೇಳಿದ್ದಾರೆ. ಅಶೋಕ ಹೋಟಲಿನಲ್ಲಿ ಈ ಬೆಂಗಳೂರು ಡೈರಿ ಯೂನಿಯನ್ ಸದಸ್ಯರು ಈ ರೀತಿ ದುಂದು ವೆಚ್ಚ ಮಾಡಿದ್ದಾರೆ ಎಂದು ರುಜುವಾತು ಮಾಡಿದರೆ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಯನ್ನು ಕೊಡುತ್ತೇನೆ. ಆದರೆ ಇದು ರುಜುವಾತು ಆಗದಿದ್ದರೆ ಮಾನ್ಯ ಸದಸ್ಯರು ತಮ್ಮ ವಿಧಾನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಬೇಕು ಆಗಲೇ ಮಾನ್ಯ ಚೌಡಯ್ಯನವರು ಹೇಳಿದಂತೆ ಸಹಕಾರ ಸಂಘಗಳು ಚನ್ನಾಗಿ ಕೆಲಸಮಾಡುತ್ತಿವೆ. ೧೯೭೪ನೇ ಇಸವಿಯಿಂದ ೨೫೫ ಸೊಸೈಟಿಗಳನ್ನು ನಾವು ರಿಜಿಸ್ಟರ್ ಮಾಡಿದ್ದೇವೆ. ಇದರಲ್ಲಿ ೪-೫ ಸಹಕಾರ ಸಂಘಗಳು ಮಾತ್ರ ಹಾಲಿನ ಉತ್ಪನ್ನದಲ್ಲಿ ಸ್ವಲ್ಪ ಕಡಿಮೆ ಆದಾಯ ಸಂಪಾದಿಸಿವೆ. ಆದನ್ನು ಬಿಟ್ಟರೆ ಎಲ್ಲಾ ಹಾಲು ಉತ್ಪಾದನೆ ಮಾಡತಕ್ಕಂಥ ಸಹಕಾರ ಸಂಘಗಳು ೩೦ ಸಾವಿರದಿಂದ ಹಿಡಿದು, ೯೦ ಸಾವಿರ ರೂಪಾಯಿಗಳ ವರೆಗೆ ವರ್ಷಕ್ಕೆ ಆದಾಯ ಸಂಪಾದಿಸಿವೆ ಎಂದರೆ ಶೇಕಡ ೯೮ರಷ್ಟು ಲಾಭವನ್ನು ಹಾಲಿನ ಉತ್ಪಾದನೆ ಯಿಂದ ಸಂಪಾದಿಸಿವೆ. ಇದಕ್ಕಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇ ಷನ್ ಇದೆ. ಅಲ್ಲದೆ ಹಾಲು ಉತ್ಪಾದಕರ ಳ ಯೂನಿಯನ್‌ಗಳು ಇವೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗೆ ಒಂದು ಬೆಂಗಳೂರು ಯೂನಿಯನ್ ಇದೆ, ಹಾಸನ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಹಾಸನ ಯೂನಿಯನ್ ಇದೆ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ಸೇರಿದಂತೆ ಮೈಸೂರು ಯೂನಿಯನ್ ಇದೆ ಮತ್ತು ತುಮಕೂರು ಜಿಲ್ಲೆಗೆ ಸೇರಿದಂತೆ ತುಮಕೂರು ಯೂನಿಯನ್ ಇದೆ. ಇಡೀ ಬೆಂಗಳೂರು, ಹಾಸನ, ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆಗಿರುವುದೇ ಆಗಲಿ, ಅಥವಾ ಈ ಯೂನಿಯನ್‌ಗಳಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆಗಿರುವುದೇ ಆಗಲಿ ಅವುಗಳ ಬಗ್ಗೆ ಗುರುತರವಾದ ಆಪಾದನೆಗಳನ್ನು ರುಜುವಾತು ಮಾಡುವುದಾದರೆ ನಾನಲ್ಲ ನನ್ನ ಹಾಗೆ ೩ ಯೂನಿಯನ್‌ಗಳ ಪ್ರೆಸಿಡೆಂಟರುಗಳು ಏನಿದ್ದಾರೆ ಅವರೂ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರು ಇದ್ದಾರೆ. ಇಂಥಹ ಸಂದರ್ಭದಲ್ಲಿ ಈ ಮನೆಯ ಹಿರಿಯ ಸದಸ್ಯರಾದವರು, ಹಿಂದೆ ಮಂತ್ರಿಗಳಾಗಿದ್ದಂಥವರು ಏನೋ ವೈಕಮ್ಯದಲ್ಲಿ ಹೇಳಿದಂಥ ಮಾತುಗಳನ್ನು ಕೇಳಿಕೊಂಡು ಬಂದು ಇಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಗುರುತರವಾದ ಆಪಾದನೆಗಳನ್ನು ಮಾಡಿರು ವುದು ತುಂಬಾ ಶೋಚನೀಯವಾದ ವಿಚಾರ ಹಾಗೂ ಇದು ನನಗೆ ವ್ಯಥೆಯ ವಿಚಾರವಾಗಿದೆ. ಹಾಲು

ಉತ್ಪಾದಕರ ಸಹಕಾರ ಸಂಘಗಳನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಅನುಮತಿಯ ಮೇರೆಗೆ ನಮ್ಮ ಸೂಪರ್‌ವೈಸರ್‌ಗಳ ಮುಖಾಂತರ ಹಳ್ಳಿಗಳಲ್ಲಿ ಈ ಸಹಕಾರ ಸಂಘಗಳನ್ನು ಪ್ರಾರಂಭಮಾಡಿದ್ದೇವೆ ಈ ಸಹಕಾರ ಸಂಘವನ್ನು ಯಾವರೀತಿ ಮ್ಯಾನೇಜ್ ಮಾಡಬೇಕು, ಅದನ್ನು ಯಾವರೀತಿ ನಡೆಸಿಕೊಂಡು ಬರಬೇಕು, ಹಾಲನ್ನು ಯಾವರೀತಿ ಟೆಸ್ಟ್ ಮಾಡಿ ಪ್ರೊಕ್ಯೂರ್ ಮಾಡಬೇಕು, ಅದನ್ನು ಯಾರೀತಿ ಸರಬರಾಜು ಮಾಡಬೇಕು ಎಂಬ ಬಗ್ಗೆ ೧೦-೧೫ ಸೊಸೈಟಿಗಳಿಗೆ ಒಬ್ಬೊಬ್ಬ ಸೂಪರ್‌ವೈಸರ್‌ಗಳನ್ನು ಹಾಕಿದ್ದೇವೆ. ಅವರು ಅದನ್ನೆಲ್ಲಾ ಮ್ಯಾನೇಜ್ ಮಾಡುತ್ತಿದ್ದಾರೆ. ಯಾವ ಒಂದು ಸೊಸೈಟಿಯವರಾದರೂ ಕೂಡ ನಮ್ಮ ಅನುಮತಿಯಿಲ್ಲದೆ ಷೇರು ತೆಗೆದುಕೊಳ್ಳುವುದಾಗಲೀ ಯಾವುದಕ್ಕಾದರೂ ವೆಚ್ಚ ಮಾಡುವುದಾಗಲೀ ಮಾಡುವುದಿಲ್ಲ. ತಿಂಗಳಿಗೆ ಒಂದು ಸಲ ಯೂನಿಯನ್ ಅಧಿಕಾರಿಗಳು, ಮ್ಯಾನೇಜಿಂಗ್ ಡೈರೆಕ್ಟರುಗಳು, ಅಧ್ಯಕ್ಷರು ಹಾಗೂ ಸದಸ್ಯರುಗಳು ಹಳ್ಳಿಗಳ ಹತ್ತಿರ ಹೋಗಿ ಸಭೆ ಸೇರಿ ಸೊಸೈಟಿಗಳ ಕುಂದು ಕೊರತೆಗಳ ವಿಚಾರವಾಗಲೀ, ಹಾಲಿನ ಪ್ರೊಕ್ಯೂರ್‌ಮೆಂಟ್ ವಿಚಾರವಾಗಲೀ, ಇನ್‌ಪುಟ್ಸ್ ಕೊಡುವ ವಿಚಾರವಾಗಲೀ, ಮಾರ್ಕೆಟಿಂಗ್ ವಿಚಾರವಾಗಲಿ, ಅಥವಾ ಸಲಕರಣೆಗಳನ್ನು ಕೊಂಡುಕೊಂಡು ಅವರಿಗೆ ಕೊಡುವ ವಿಚಾರದಲ್ಲಿ ಏನೇ ನ್ಯೂನತೆಗಳು ಇದ್ದರೂ ಕೂಡ ಅನೆಲ್ಲವನ್ನೂ ನಾವು ಪರಿಶೀಲಿಸಿ ಮಾಡುತ್ತೇವೆ.

ಹೀಗೆ ಪ್ರತಿಯೊಂದು ವಿಚಾರದಲ್ಲಿಯೂ ನಾವು ಸೂಕ್ಷ್ಮವಾಗಿ ತನಿಖೆ ಮಾಡಿ, ಪರಿಶೀಲನೆ ಮಾಡಿ ಕೆಲಸಮಾಡುತ್ತಾ ಇರುವುದರಿಂದ ಇವತ್ತು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಹಾಲು ಉತ್ಪಾದಕರ ಸಹಕಾರ ಸಂಘಗಳು ಚೆನ್ನಾಗಿ ಪ್ರಗತಿದಾಯಕವಾಗಿ ಕೆಲಸ ಮಾಡುತ್ತಿವೆ ಎಂದರೆ ತಪ್ಪಾಗಲಾರದು. ಇದರಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ನಾವು ಸಾಧಿಸಬೇಕಾದರೆ ಈ ಪ್ರೊಸೆಸಿಂಗ್ ಮತ್ತು ಮಾರ್ಕೆಟಿಂಗ್ ಈ ಸಹಕಾರ್ಯಕ್ಷೇತ್ರಕ್ಕೆ ಬರಬೇಕಾಗುತ್ತದೆ. ಆದರೆ ಈಗ ನಾವು ಟ್ರೈನಿಂಗ್ ಕೊಡತಕ್ಕಂಥಾದ್ದು ಹಾಗೂ ಇನ್‌ಪುಟ್ಸ್ ಕೊಡತಕ್ಕಂಥಾದ್ದನ್ನು ಮಾಡುತ್ತಿದ್ದೇವೆ. ಇನ್ನು ಉಳಿದ ಕೆಲಸವನ್ನು ಅಂದರೆ ಮಾರ್ಕೆಟಿಂಗ್ ಮಾತ್ರ ತಕ್ಕಂಥಾದನ್ನು, ಹಾಲನ್ನು ಸಂಸ್ಕರಣ ಮಾಡಿ ಮಾರಾಟ ಮಾಡತಕ್ಕಂಥ ಕೆಲಸವನ್ನು ಕರ್ನಾಟಕ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ನವರು ಮಾಡುತ್ತಿದ್ದಾರೆ. ಡಾ|| ಕುರಿಯನ್ ಅವರು ಕರ್ನಾಟಕದಲ್ಲಿ ಮತ್ತು ಇತರ ಎಲ್ಲಾ ರಾಜ್ಯಗಳಲ್ಲಿ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಎಂದು ಮಾಡಿ, ಸಹಕಾರ ಸಂಘಗಳಲ್ಲಿ ಸಂಸ್ಕರಣ ಮಾಡಿದಂಥ ಹಾಲನ್ನು ಇಲ್ಲಿ ಮಾರಾಟ ಮಾಡಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಈ ಒಂದು ಸಲಹೆಯನ್ನು ನಾವು ಅಳವಡಿಸುವುದಾದರೆ ಎಷ್ಟು ಪ್ರಮಾಣದಲ್ಲಿ ಹಾಲನ್ನು ಉತ್ಪಾದನೆ ಮಾಡಬೇಕು ಆ ಉತ್ಪಾದನೆಗೆ ಅನುಗುಣವಾಗಿ ಪ್ರೊಸೆಸಿಂಗ್ ಫೆಸಿಲಿಟೀಸ್ ಯಾವ ರೀತಿ ಇನ್‌ಕ್ರೀಸ್ ಮಾಡಬೇಕು, ಅದನ್ನು ಹೇಗೆ ಪ್ರೊಕ್ಯೂರ್ ಮಾಡಬೇಕು, ಹೇಗೆ ಮಾರಾಟ ಮಾಡಬೇಕು ಮತ್ತು ಮುಳಿಗಾಲ ಹಾಗೂ ಬೇಸಿಗೆಕಾಲದಲ್ಲಿ ಆಗತಕ್ಕಂಥ ಹಾಲಿನ ವ್ಯತ್ಯಾಸಗಳನ್ನು ಯಾವರೀತಿ ಸರಿದೂಗಿಸಿಕೊಳ್ಳಬೇಕು ಎನ್ನತಕ್ಕಂಥ ವಿಚಾರಗಳನ್ನೆಲ್ಲಾ ಯೋಚನೆ ಮಾಡಿ ಈ ಹಾಲಿನ ಉತ್ಪಾದನೆಯನ್ನು ಲಾಭದಾಯಕವಾಗಿ ಮಾಡಲು ಅನುಕೂಲವಾಗುತ್ತದೆ. ಇದಕ್ಕೋಸ್ಕರ ಒಂದು ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಅನ್ನು ನಮ್ಮ ರಾಜ್ಯದಲ್ಲಿ ಮಾಡಿದರೆ ಉತ್ತಮ. ಇದರಿಂದ ರೈತರಿಗೆ ಅನುಕೂಲವಾಗುತ್ತದೆಂದು ನಾನು ಈ ಸಲಹೆಯನ್ನು ಮಾಡುತ್ತಿದ್ದೇನೆ. ಭಾರತದೇಶದಲ್ಲಿ ಎಲ್ಲಾ ರಾಜ್ಯಗಳಲ್ಲೂ ಕೂಡ ಈ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಮಾಡತಕ್ಕಂಥ ಸಲಹೆಯನ್ನು ಒಪ್ಪಿಕೊಂಡಿವೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳರಾಜ್ಯಗಳು ಈ ಒಂದು ಸಲಹೆಯನ್ನು ಹೆಚ್ಚಿನ ರೀತಿಯಲ್ಲಿ ಒಪ್ಪಿಕೊಂಡಿವೆ. ಆ ರಾಜ್ಯಗಳಲ್ಲಿ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಹಾಗೆಯೇ ನಮ್ಮ ರಾಜ್ಯದಲ್ಲೂ ಕೂಡ ಬೆಂಗಳೂರು ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಚೆನ್ನಾಗಿ ಕೆಲಸಮಾಡುತ್ತಿದೆ ಹಾಗೂ ಹೆಚ್ಚಿನ ರೀತಿಯಲ್ಲಿ ನಾಗರೀಕರಿಗೆ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಈ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಕಾರ್ಪೊರೇಷನ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿದೆ. ಹಾಗೆಯೇ ಈ ಸೊಸೈಟಿಗಳು ಕೋಆಪರೇಟೀವ್ ಕಂಪನಿ ಆಕ್ಟ್ ಕೆಳಗೆ ರಿಜಿಸ್ಟರ್ ಆಗಿದೆ. ಈ ಎಲ್ಲಾ ಸೊಸೈಟಿಗಳು ಸಹಕಾರ ತತ್ವದಲ್ಲಿ ನಂಬಿಕೆಯಿಟ್ಟು ಕೆಲಸಮಾಡಿದರೆ ಎಲ್ಲಾ ಕೆಲಸಗಳು ಚೆನ್ನಾಗಿ ನಡೆಯುತ್ತವೆ ಇದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಅನ್ನು ಸ್ಥಾಪನೆ ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಈ ಸಹಕಾರ ಸಂಘಗಳಲ್ಲಿ ಸಾಲ ಕೊಡುವ ವಿಚಾರಕ್ಕೆ ಬರುವುದಾದರೆ ಸಾಲದ ಹಣಗಳಲ್ಲಿ ೧೦ ಪರ್ಸೆಂಟ್ ಷೇರ್ ಹಣವನ್ನು ಕಳೆದು ಉಳಿದ್ದಿದನ್ನು ಕೊಡುತ್ತೆವೆ. ಉದಾಹರಣೆಗೆ ೧೦೦೦ ರೂ ಸಾಲಿ ಗಳನ್ನು ಸಾಲಕೊಡುವುದಾದರೆ ಅವರಲ್ಲಿ ೧೦೦ ರೂಪಾಯಿಗಳನ್ನು ಷೇರಿನಲ್ಲಿ ಕಡಿಮೆಮಾಡಿಕೊಂಡು ೯೦೦ರೂಪಾಯಿ ಗಳನ್ನು ಕೊಡುತ್ತೇವೆ.

ಆದರೆ ಬಡ್ಡಿ ಹಾಕುವಾಗ ಮಾತ್ರ ಶೇಕಡ ರೂಪಾಯಿಗೆ ಬಡ್ಡಿ ಹಾಕುತ್ತಾರೆ. ಇದನ್ನು ತಪ್ಪಿಸ ಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ. ಜಮೀನನ್ನು ಅಡಮಾನವಿಡುವ ಗ ರಿಜಿಸ್ಟ್ರೇಷನ್ ಶುಲ್ಕವಾಗಿ ಸಾವಿರ ರೂಪಾಯಿಗೆ ಆರವತ್ತು ರೂಪಾಯಿಗಳಂತೆ ಕಟ್ಟಿಸಿಕೊಳ್ಳುತ್ತಿದ್ದಾರೆ. ಆದರೆ, ಒಂದು ಲಕ್ಷ ರೂಪಾಯಿಗಳಿಗೆ ಆರು ಸಾವಿರ ರೂಪಾಯಿ ಸ್ಟ್ಯಾಂಪ್ ಡ್ಯೂಟಿಯನ್ನು ಕಟ್ಟಬೇಕಾ ಗುತ್ತದೆ. ಆದರೆ, ವಾಣಿಜ್ಯ ಬ್ಯಾಂಕಿನವರು ಟೈಟ್ಲ್ ಡೀಡನ್ನು ಅಡಮಾನವಿಟ್ಟುಕೊಂಡು ಹಣವನ್ನು ಕೊಡುತ್ತಾರೆ. ಈ ಒಂದು ವ್ಯವಸ್ಥೆಯನ್ನು ಇಲ್ಲೂ ಕೂಡ ಮಾಡಿಕೊಡಬೇಕೆಂದು ಹೇಳುತ್ತೇನೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ಟ್ರ್ಯಾಕ್ಟರುಗಳು, ಪವರ್ ಟಿಲ್ಲರುಗಳು ಮತ್ತು ಇತರ ವ ಹಣಗಳಿಗಾಗಿ ಸಾಲ ತೆಗೆದುಕೊಳ್ಳಬೇಕಾದರೆ ಜಮೀನನ್ನು ಅಡಮಾನವಿಡುವುದರ ಜೊತೆಗೆ ಟ್ರ್ಯಾಕ್ಟರು ಅಥವಾ ವಾಹನಗಳನ್ನೂ ಅಡಮಾನವಿಡಬೇಕಾಗುತ್ತದೆ. ಆದರೆ, ವಾಣಿಜ್ಯ ಬ್ಯಾಂಕುಗಳಲ್ಲಿ ಜಮೀನನ್ನು ಅಡಮಾನವಿಟ್ಟು ಕೊಳ್ಳುವ ವ್ಯವಸ್ಥೆ ಇಲ್ಲ. ಅವರು ನೂರು ರೂಪಾಯಿಗಳಿಗೆ ೨೫ ರೂಪಾಯಿಗಳನ್ನು ಕಟ್ಟಿಸಿಕೊಂಡು, ಸಂಬಂಧಪಟ್ಟ ವಾಹನವನ್ನು ಮಾತ್ರ ಅಡಮಾನವಿಟ್ಟುಕೊಳ್ಳುತ್ತಾರೆ. ಈ ಒಂದು ಸೌಕರ್ಯವನ್ನೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸಾಲ ಪಡೆಯುವ ರೈತರಿಗೆ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಚೌಡಯ್ಯನವರು, ಸಹಕಾರ ಸಂಘವನ್ನಲ್ಲಿ ಲೆಕ್ಕ ಪರಿಶೋಧನೆ ಕೆಲಸ ಬಹಳ ನಿಧಾನವಾಗಿ ಆಗುತ್ತಿದೆ ಎಂದು ಹೇಳಿದರು. ಕೆಲವು ಹಾಲು ಉತ್ಪಾದಕರ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಕಳೆದ ೬ ೭ ವರ್ಷಗಳಿಂದಲೂ ಆಗಿಲ್ಲ ಈ ಬಗ್ಗೆ ಅನೇಕ ಸಲ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ಅವರನ್ನು ಕೇಳಿದಾಗ, ನಮ್ಮಲ್ಲಿ ಸಿಬ್ಬಂದಿ ಇಲ್ಲ. ಹೆಚ್ಚು ಹೆಚ್ಚು ಸಹಕಾರ ಸಂಘಗಳು ವ್ಯಾಪಾರವಾಗುತ್ತವೆ. ಇಂತಹವರಲ್ಲಿ ಹೆಚ್ಚು ಆಡಿಟ್ ಸಿಬ್ಬಂದಿ ಇಲ್ಲದೆ ಇರುವಾಗ, ಎಲ್ಲ ಸಹಕಾರ ಸಂಘ ಗಳ ಲೆಕ್ಕ ಪರಿಶೋಧನೆಯನ್ನು ಹೇಗೆ ಮಾಡುವುದು ಎಂದು ಹೇಳುತ್ತಾರೆ. ಗುಜರಾತ್‌ನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಹೆಚ್ಚಿನ ರೀತಿಯಲ್ಲಿ ಪ್ರಗತಿ ಸಾಧಿಸುತ್ತಿರುವುದಕ್ಕೆ ಅವರು ಅನುಸರಿಸು ತ್ತಿರುವ ಪದ್ಧತಿ ಕಾರಣವಾಗಿದೆ. ಅಲ್ಲಿನ ಪ್ರತಿಯೊಂದು ಸಂಘದಲ್ಲೂ ಮೂರು ತಿಂಗಳಿಗೊಮ್ಮೆ ಟ್ರಾಯಲ್ ಆಡಿಟ್ ಮಾಡುವುದರ ಜೊತೆಗೆ ವರ್ಷಕೊಂದು ಸಲ ತಪ್ಪದೆ ಆಡಿಟ್ ಮಾಡಿ, ಸಂಘದ ಜಮಾ-ಖರ್ಚು ಪಟ್ಟಿಯನ್ನು ಪರಿಶೀಲನೆ ಮಾಡಿ, ಯೂನಿಯನ್‌ಗಳಿಗೆ ಸೂಚನೆ ಕೊಡಲಿಕ್ಕೆ ಅವಕಾಶವಿದೆ. ಆದರೆ, ನಮ್ಮ ಯೂನಿಯನ್‌ನಲ್ಲಿ ಆನೇಕ ವರ್ಷಗಳ ದರೂ ಲೆಕ್ಕಪರಿಶೋಧನೆಯಾಗದಿರುವುದು ಬಹಳ ಶೋಚ ನೀಯ ಸಂಗತಿ. ಇಂತಹವರಿಗೆಲ್ಲ ಸರ್ಕಾರದವರು ಅವಕಾಶ ಕೊಡಬಾರದು. ನಮ್ಮ ತಾಲ್ಲೂಕಿನಲ್ಲಿ ಚಿಲ ಕಲನೇರ್ಪು ಸೇವಾ ಸಹಕಾರ ಸಂಘವೊಂದಿದೆ. ಅದರ ಲೆಕ್ಕಪತ್ರಗಳ ಪರಿಶೋಧನೆ ೧೯೭೧ ರಿಂದಲೂ ಆಗಿಲ್ಲ. ಮತ್ತೆ ಅಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಷ್ಟು ಬಾಕಿ ಉಳಿದಿವೆ, ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರ ಜೊತೆಗೆ ಮೂರು ಅಥವಾ ನಾಲ್ಕು ವರ್ಷಗಳಿಗೊಂದು ಸಲ ನ ಮಕಾವಸ್ತಾಗಿ ಸರ್ವಸದಸ್ಯರ ಸಭೆಯನ್ನು ಮಾಡಲಾಗುತ್ತಿದೆ ಇದನ್ನೆಲ್ಲಾ ನೋಡಿಕೊಂಡು ಅಧಿಕಾ ರಿಗಳು ಸಹಕಾರಿಸುತ್ತಿರುವರೋ ಅಥವಾ ಕ್ರಮ ತೆಗೆದುಕೊಂಡಿರುವರೋ ಗೊತ್ತಾಗುತ್ತಿಲ್ಲ. ಒಂದು ವೇಳೆ ಕ್ರಮ ತೆಗೆದುಕೊಳ್ಳದಿದ್ದರೆ ಕೂಡಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಿಳಿಸಬಯಸುತ್ತೇನೆ. ಅಲ್ಲಿ ಬೊವ್ಮೈ ಕಲ್ಲು ಸೇವಾಸಹಕಾರ ಸಂಘವೆಂದು ಇನ್ನೊಂದಿದೆ. ಅದಕ್ಕೆ ಕಾರ್ಯದರ್ಶಿಯಾಗಿರುವವರು ಒಬ್ಬರು ಕಂಟ್ರಾಕ್ಟರರು ಮತ್ತು ದೊಡ್ಡ ಜಮೀನ್ದಾರರು. ಇಷ್ಟಿದ್ದರೂ ಅವರು ಈ ಸಂಘವನ್ನು ತಮ್ಮ ಲಾಭಕ್ಕೆ ಮಾತ್ರ ಇಟ್ಟುಕೊಂಡಿದ್ದಾರೆ. ಅವರು ಪೆಡ್ ಸೆಕ್ರೆಟರಿ. ಅವರು ಎರಡು ವರ್ಷಗಳಿ ದಲೂ ತಿಂಗಳಿಗೆ ೧೫೦ ರೂಪಾಯಿಗಳಂತೆ ಸಂಬಳ ಪಡೆಯುತ್ತಿದ್ದಾರಲ್ಲಾ ಮೊನ್ನೆ ಸಂಘದ ಸರ್ವ ಸದಸ್ಯರ ಸಭೆಯನ್ನು ಅವರ ಮನೆಯಲ್ಲೇ ಕರೆದು, ಅವರ ಸಂಬಳದ ಮೊಬಲಗನ್ನು ತಿಂಗಳಿಗೆ ೨೦೦ ರೂಪಾಯಿಗಳಿಗೆ ಏರಿಸಿಕೊಂಡಿದ್ದಾರೆ. ಸರ್ವ ಸದಸ್ಯರ ಸಭೆ ಗೆ ಅತ್ತು ಮಾತಿನ್ನ ಜಾಗದಲ್ಲಿ ಸಹಕಾರ ವಿಸ್ತರಣಾ ಧಿಕಾರಿ ವೀಶ್ವತರ ಸದಸ್ಯರೆಲ್ಲರೂ ಸೇರಿದ್ದರೆ. ಈ ಆಸಾಮಿ ಪತ್ತೆ ಇಲ್ಲದ ತನಗೆ ಬೇಕಾದ ಕಡೆ ಸರ್ವ ಸದಸ್ಯರ ಸಭೆ ಯನ್ನು ನಡೆಸಿಕೊಂಡಿದ್ದಾನೆ. ಹೀಗಾಗಿ, ಸಂಘದ ಕಾರ್ಯದರ್ಶಿಗಳು, ಅಧ್ಯಕ್ಷರು ಮತ್ತು ಆಡಳಿತ

ಮುಂಡಲಿ ಸದಸ್ಯರು ಸಹಕಾರ ಸಂಘಗಳಿಂದರೆ ತಮ್ಮ ಸ್ವಂತ ಆಸ್ತಿಗಳೆಂದು ಭಾವಿಸಿ ವ್ಯವಹಾರ ಮಾಡುತ್ತಿರುವಂತೆ ಕಾಣುತ್ತಿದೆ. ಇಂತಹ ಸಹಕಾರ ಸಂಘಗಳು ಒಂದೊಂದು ತಾಲ್ಲೂಕಿನಲ್ಲಿದ್ದರೆ ಇಡೀ ಸಹಕಾರ ತತ್ವಕ್ಕೆ ಪೆಟ್ಟು ಬಿಳುತ್ತದೆ. ಜೊತೆಗೆ ಸಹಕಾರ ತತ್ವ ನಾಶವಾಗಿಬಿಡುತ್ತದೆ. ಇಂತಹವಕ್ಕೆಲ್ಲ ಸರ್ಕಾರದವರು ಅವಕಾಶಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯೂರೋಪಿನ ದೇಶಗಳು ಮತ್ತು ಕರ್ನಾಟಕ ಹೈನು ಅಭಿವೃದ್ಧಿ ನಿಗಮದವರು ಯೂನಿಯನ್‌ಗಳನ್ನು ಸ್ಥಾಪಿಸಿ, ಅದರ ಮುಖಾಂತರ ಹಳ್ಳಿಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ತೆರೆದು, ರೈತರಿಂದ ಬಂದ ಹಾಲನ್ನು ಯೂನಿಯನ್‌ಗಳಲ್ಲಿ ಸಂಸ್ಕರಣ ಮಾಡಿ, ನಿರ್ದಿಷ್ಟ ಬೆಲೆ ನಿಗದಿ ಮಾಡಿ ಮಾರಾಟ ಮಾಡುವ ವ್ಯವಸ್ಥೆಯಿದೆ ಅದೇ ರೀತಿ ಸಹಕಾರ ತತ್ವದ ಮುಖಾಂತರ ರೈತನು ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆಯನ್ನು ನಿಗದಿ ಮಾಡಿ ಮಾರಾಟ ಮಾಡುವ ವ್ಯವಸ್ಥೆ ಮಾಡಿದರೆ, ಖಂಡಿತ ರೈತರಿಗೆ ಅನುಕೂಲವಾಗುತ್ತದೆ. ಅದರ ಜೊತೆಗೆ ಹಳ್ಳಿಗಾಡಿನಲ್ಲಿರುವ ನಿರುದ್ಯೋಗ ಸಮಸ್ಯೆಯೂ ಪರಿಹಾರವಾಗುತ್ತದೆ. ಮಾನ್ಯ ರಾಮಕೃಷ್ಣ ಅವರು ಮಾತನಾಡುತ್ತಾ ಹಳ್ಳಿಗಳಲ್ಲಿರುವ ಸಹಕಾರ ಸಂಘಗಳು ಸರಿಯಾಗಿ ನಡೆಯುತ್ತಿಲ್ಲ. ಪಟ್ಟಣಗಳಲ್ಲಿರುವ ಸಹಕಾರ ಸಂಘಗಳು ಮಾತ್ರ ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದರು ಆದರೆ, ನಾವು ಸಹಕಾರ ಸಂಘಗಳನ್ನು ಮಾಡಿರುವುದು ಹಳ್ಳಿಗಳಲ್ಲಿಯೇ ಹೊರತು ಪಟ್ಟಣಗಳಲ್ಲಲ್ಲ. ನೇರವಾಗಿ ಯಾರು ಹಾಲನ್ನು ಉತ್ಪಾದನೆ ಮಾಡುತ್ತಾರೆ ಅಂತಹವರನ್ನು ಸದಸ್ಯರನ್ನಾಗಿ ಮಾಡಿಕೊಂಡು ಹಳ್ಳಿಗಳಲ್ಲಿ ಕಟ್ಟಿರುವ ಸಹಕಾರ ಸಂಘಗಳಲ್ಲಿ ಸುಮಾರು ನೂರಕ್ಕೆ ತೊಂಬತ್ತೈದರಷ್ಟು ಸಂಘಗಳು ಚೆನ್ನಾಗಿ ಲಾಭ ಸಂಪಾದಿಸುತ್ತಿವೆ. ಈ ಸಹಕಾರ ಸಂಘಗಳಲ್ಲಿ ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗದವರಿಗೆ ಸೇರಿದವರೆಲ್ಲರಿಗೂ ಸದಸ್ಯತ್ವವನ್ನು ಕೊಡಲಾಗಿದೆ. ಸಾಮಾನ್ಯವಾಗಿ ಪ್ರತಿ ಸದಸ್ಯರೂ ಪ್ರತಿ ತಿಂಗಳೂ ೧೫ರಿಂದ ೨೦೦ ರೂಪಾಯಿಗಳವರೆಗೆ ಸಂಪಾದಿಸುತ್ತಾರೆ.

ಹೈನು ಅಭಿವೃದ್ಧಿಯಲ್ಲಿ ಹೇಗೆ ಯೂನಿಯನ್‌ಗಳಿವೆ ಹಾಗೆಯೇ ಕುರಿಯ ಪೋಷಣೆಯಲ್ಲಿಯೂ ಯೂನಿಯನ್‌ಗಳನ್ನು ಮಾಡಿಕೊಂಡು, ಸಹಕಾರ ಸಂಘಗಳ ಮುಖಾಂತರ ಉಣ್ಣೆಯಾ ಇನ್ನಾವುದೇ ಸಂಘಗಳ ಮುಖಾಂತರ ಕುರಿಗಳನ್ನು ಪೋಷಿಸಲು ಮತ್ತು ಅವುಗಳಿಗೆ ಯೋಗ್ಯ ಬೆಲೆಯನ್ನು ನಿಗದಿ ಮಾಡಿ ಮಾರಾಟ ಮಾಡಲು ವ್ಯವಸ್ಥೆ ಮಾಡಿದರೆ ನಿಜಕ್ಕೂ ರೈತರಿಗೆ ಅನುಕೂಲವಾಗುತ್ತದೆ. ಅದೇ ರೀತಿ ಕೋಳಿ ಸಾಣಿಗೆ ಹಳ್ಳಿಗಾಡುಗಳಲ್ಲಿ ಕೋಳಿ ಸಾಕುವವರು ಬಹಳ ಜನರಿದ್ದಾರೆ. ಸಾಮಾನ್ಯವಾಗಿ ಅವರ ಪ್ರತಿ ಮನೆಯಲ್ಲೂ ಒಂದು ಹಳ್ಳಿಗಳಲ್ಲೂ ಇದ್ದಾರೆ. ಕೋಳಿ ಸಾಣಿಯಿಂದ ಉತ್ತಮ ಗೊಬ್ಬರ ಸಿಕ್ಕುವುದರ ಜೊತೆಗೆ ಮೊಟ್ಟೆ ಮಾರಾಟದಿಂದ ಹಣವೂ ಒರುತ್ತದೆ. ಅಲ್ಲದೆ, ಮನೆಯಲ್ಲಿರುವ ಹೆಂಗಸರು ಮತ್ತು ಮಕ್ಕಳಿಗೆ ಉದ್ಯೋಗ ದೊರಕಿದಂತಾಗುತ್ತದೆ. ಅದು ಬಿಟ್ಟು, ಎಚ್.ಎ.ಎಲ್., ಎಚ್.ಎಂ.ಟಿ. ಮುಂತಾದ ಬೃಹತ್ ಕಾರ್ಖಾನೆಗಳಿಗೆ ಕೊಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯಲ್ಲ ನಾನೇನೂ ಬೃಹತ್ ಕಾರ್ಖಾನೆಗಳು ಬೇಡವೆಂದು ಹೇಳುವುದಿಲ್ಲ. ಆದರೆ, ಆಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಎಷ್ಟು ಜನಕ್ಕೆ ಉದ್ಯೋಗ ನಿಡಲಾಗುತ್ತಿದೆ? ಇಷ್ಟೇ ಹಣವನ್ನು ಗ್ರಾಮಾಂತರ ಸ್ಥಳಗಳಲ್ಲಿ ಉತ್ಪತ್ತಿ ದೊರಕುವ ಉದ್ಯೋಗಗಳ ಕುರಿತು ಖರ್ಚು ಮಾಡಿ, ರೈತನು ಯಾವ ತೊಡಕುಗಳಿಗೂ ಸಿಕ್ಕಿಹಾಕಿಕೊಳ್ಳದ ಹಾಗೆ ಅವನ ಪದಾರ್ಥಗಳಿಗೆ ಯೋಗ್ಯ ಬೆಲೆಯನ್ನು ನಿಗದಿ ಮಾಡಿ ಅವುಗಳ ಮಾರಾಟಕ್ಕೆ ವಿಶೇಷ ಮಾಡಿದರೆ, ಅಲ್ಲಿ ವಿದ್ಯಾವಂತ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಕೋಳಿ ಸಾಕಿದರೆ, ಅದರ ವೆಚ್ಚವೆಲ್ಲ ಒಂದು ತಿಂಗಳಿಗೆ ಹೆರಳಿ ಹಣ ಬಂದುಬಿಡುತ್ತವೆ. ಅದನ್ನು ಮಾರಾಟ ಮಾಡುವುದಕ್ಕೆ ಅವಕಾಶ ಇಲ್ಲದೇ ತಿಪ್ಪಿಗೆ ಹಾಕುತ್ತಾರೆ ಕೋಳಿಯನ್ನು ಕೂಡ ಮಾರಾಟ ಮಾಡುವ ವ್ಯವಸ್ಥೆಯಿಲ್ಲ. ಸಹಕಾರ ಸಂಘಗಳ ಮೂಲಕ ಮಾರಾಟ ಮಾಡುವಂತ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಅಧಿಕಾರಿಗಳು ಕೂಡ ನಿಷ್ಠೆಯಿಂದ ಕೆಲಸ ಮಾಡಿ ಸಹಕಾರಿ ತತ್ವಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತಂದು ಅದರ ಫಲ ರೈತನಿಗೆ ಮುಟ್ಟುವಂತ ವ್ಯವಸ್ಥೆ ಮಾಡಬೇಕೆಂದು ಹೇಳಿ, ಮಾನ್ಯ ಮಂತ್ರಿಯವರು ತಂದಿರುವ ಬೇಡಿಕೆಯನ್ನು ಒಪ್ಪಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೨.೦೦ ಪಿ.ಎಂ

ಶ್ರೀ ಎ. ಲಕ್ಷ್ಮೀಸಾಗರ್.—ನಿನ್ನೆ ಸಾಯಂಕಾಲ ೬ ಗಂಟೆಯವರೆಗೆ ಸಭೆ ನಡೆದಿದೆ. ಕಾರ್ಯಕಲಾಪಗಳ ಸಲಹಾ ಸಮಿತಿ ತೀರ್ಮಾನದ ಪ್ರಕಾರ ಇದು ಮುಂದಾನೆ ಸಭೆ ನಡಿತು ನಂತರ ೧೦-೧೧ದಿನಗಳ ಕಾಲ ಈ ಸಭೆಗೆ ವಿರಾಮ ಇರತಕ್ಕದೆಂದು ಸಾಯಂಕಾಲ ಗೊತ್ತಾಗಿದೆ. ಊರಿಗೆ ಹೋಗತಕ್ಕ ಸದಸ್ಯರುಗಳಿಗೆ ತೊಂದರೆಯಾಗುವುದು ಬೇಡ. ೩೦ನೇ ತಾರೀಖು ಮತ್ತೆ ಸೇರುವುದರಿಂದ ೨-೩ ಜನ ಸದಸ್ಯರು ಮಾತನಾಡಿ ಮಂತ್ರಿಗಳು ನಂತರ ಉತ್ತರ ಕೊಡಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ —ಆ ದಿನದ ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಷೆಡ್ಯೂಲ್ ಪ್ರಕಾರ ಯಾವ ಕಾರ್ಯಕ್ರಮಗಳು ಇಲ್ಲಿ ನಡೆಯುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಭಾಸ್ಕರ ಶೆಟ್ಟರ ಅನುಕೂಲಕೋಸ್ಕರವಾಗಿಯೇ ವಿನಾಕಾರಣ ನಾವು ಒಪ್ಪಿಕೊಂಡಿದ್ದೇವೆ. ತಾವು ಕೂಡ ಸ್ವಲ್ಪ ಸೌಜನ್ಯದಿಂದ ವರ್ತನೆ ಮಾಡಬೇಕು.

ಶ್ರೀ ಬಿ. ಭಾಸ್ಕರ ಶೆಟ್ಟಿ — ನಮ್ಮ ಪಕ್ಷದ ಅನುಕೂಲಕೋಸ್ಕರ ಹಾಗೂ ನಿಮ್ಮ ಪಕ್ಷದ ಅನುಕೂಲ ಕೋಸ್ಕರ ಅಷ್ಟು ದಿವಸ ಸಭೆ ಮುಂದೆ ಹಾಕರತಕ್ಕದ್ದು.

SRI S M. YAHYA —We can continue for half an-hour and close the discussion and the reply could be given on 30th. Even in the Council they are sitting from 12-00 noon.

SRI M.C. BASAPPA —There should be sufficient time for discussion. Most of the time is taken away by the discussion under Rule 312. You cannot shut out the discussion.

SRI S.M YAHYA.—In Parliament also, guilloting is done every time. They keep up the schedule. Let us spend some more time and close the discussion now.

ಶ್ರೀ ಬಿ ಭಾಸ್ಕರ ಶೆಟ್ಟಿ.—ಸ್ವಾಮಿ, ೩೦ನೇ ತಾರೀಖು ಒಂದು ಗಂಟೆ ಮಾನ್ಯ ಸದಸ್ಯರುಗಳಿಗೆ ಚರ್ಚೆಗೆ ಅವಕಾಶ ಮಾಡಿಕೊಡಿ. ನಂತರ ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಆಗಬಹುದು.

SRI S.M. YAHYA.—Endless discussion is not possible.

SRI A. LAKSHMI SAGAR.—I have not suggested that endless discussion.

MR. SPEAKER.—On 30th we can continue the discussion and also reply. There are altogether four members from the opposition and 6 from the Ruling party.

ಶ್ರೀ ಎ ಎಲ್. ಶಿವಪ್ಪ.—ತಮ್ಮ ಪಟ್ಟಿ ಪ್ರಕಾರ ೧೦ ಜನ ಇದ್ದಾರೆ, ಒಬ್ಬೊಬ್ಬರಿಗೆ ೫ ನಿಮಿಷ ಅಂದರೂ ೫೫ ನಿಮಿಷ ಆಗುತ್ತದೆ.

ಶ್ರೀ ಜಿ.ವಿ. ಶಂಕರ್‌ರಾವ್.—ಅಧ್ಯಕ್ಷರೇ, ಇವ್ಲಿ ಕಾಲಿಂಗ್ ಅಟೆನ್‌ಷನ್‌ಗೆ ಮತ್ತು ರೂಲ್ ೩೧೨ರ ಕೆಳಗೆ ವಿಷಯ ಪ್ರಸ್ತಾಪಕ್ಕೆ ವೇಳೆ ಜಾಸ್ತಿಯಾಗುತ್ತಿದೆ. ಆಮೇಲೆ ಭಾಷಣದಲ್ಲಿ ವಿಷಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಹೆಚ್ಚಿಗೆ ವೇಳೆ ಕೊಡಬೇಕು.

MR. SPEAKER.—On 30th we have to complete the discussion and also the reply.

The House will now stand adjourned and meet on 30th April 1979 at 1-00 P M.

*The House adjourned at Ten Minutes past One of the Clock to meet at One of the Clock on Monday, the 30th April 1979.*